# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY



ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038




HAMPI TIMES
No. 1 Leading Local News Paper
85,000
E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 58 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 27.08.2024 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 58 • PRGI No:KARKAN/2023/88055 • VIJAYANAGARA • 27.08.2024 • Tuesday • Page:04 • Rs:2


# ಪೌರಾಯುಕ್ತರ ಅಮಾನತ್ತಿಗಾಗಿ ಸದಸ್ಯರ ಪ್ರತಿಭಟನೆ

## ನಗರಸಭೆ ಕಮಿಷನ್‌ರ್ ನಿರ್ಲಕ್ಷ್ಯದಿಂದ ನಗರದ ಸೌಂದರ್ಯ ಹಾಳು | ಮೃತ ಬಾಲಕನ ಕುಟುಂಬಕ್ಕೆ ಪರಿಹಾರ ನೀಡಲು ಒತ್ತಾಯ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ 7ನೇ ವಾರ್ಡ್ ಅನಂತಶಯನಗುಡಿ ಹೊಸ ಪ್ಲಾಟಿನಲ್ಲಿನ ಕಲುಷಿತ ಗುಂಡಿಗೆ ಬಿದ್ದು 4 ವರ್ಷದ ಬಾಲಕ ವಿರಾಟ್ ಸಾವಿಗೀಡಾಗಿರುವುದು ಅವರ ಕುಟುಂಬಕ್ಕೆ ತುಂಬಲಾರದ ನಷ್ಟವಾಗಿದೆ. ನಗರಸಭೆ ಪೌರಾಯುಕ್ತರ ದಿವ್ಯ ನಿರ್ಲಕ್ಷ್ಯ ಮತ್ತು ಬೇಜಾವಾದ್ಧಾರಿಯಿಂದಾಗಿ ನಗರದಲ್ಲಿ ಮಗುವೊಂದು ಮೃತಪಟ್ಟಿದ್ದೂ, ಕೂಡಲೇ ಪೌರಾಯುಕ್ತ ಚಂದ್ರಪ್ಪನವರನ್ನು ಅಮಾನತ್ತು ಮಾಡಬೇಕೆಂದು ಆಗ್ರಹಿಸಿ ನಗರಸಭೆ ಸದಸ್ಯರು ನಗರಸಭೆ ಎದುರು ಸೋಮವಾರ ಬೆಳಿಗ್ಗೆಯಿಂದ ರಾತ್ರಿವರೆಗೆ ಪ್ರತಿಭಟನೆ ನಡೆಸಿದರು.

ಅಲ್ಲಿನ ನಿವಾಸಿಗಳು ಖಾಸಗಿ ನಿವೇಶನದವರಿಗೆ ನೋಟೀಸ್ ನೀಡಿ ತಗ್ಗು ಮುಚ್ಚುವಂತೆ ಕೋರಿದ್ದರೂ ಪೌರಾಯುಕ್ತರು ನಿರ್ಲಕ್ಷ್ಯವಹಿಸಿದ್ದಾರೆ. ಏನಾದರೂ ಕೇಳಿದ್ರೆ ನಾನು ಅಷ್ಟು ಕೊಟ್ಟು ಬಂದಿದ್ದೀನಿ, ಇಷ್ಟು ಕೊಟ್ಟು ಬಂದಿದ್ದೀನಿ ಅಂತಾರೆ. ಹೊಸಪೇಟೆಯನ್ನು ಸುಲಿಗೆ ಮಾಡಲು ಬಂದಿದ್ದಾರೆಯೇ ಎಂದು ನಗರಸಭೆ ಸದಸ್ಯರು ಪೌರಾಯುಕ್ತರು ವಿರುದ್ಧ >>3



# ಯಶಸ್ಸಿಗೆ ಶ್ರೀಕೃಷ್ಣನ ಸಂದೇಶ ಪಾಲಿಸಿ

## ಬಳ್ಳಾರಿಯಲ್ಲಿ ಜರುಗಿದ ಶ್ರೀಕೃಷ್ಣ ಜಯಂತ್ಯೋತ್ಸವದಲ್ಲಿ ಸಂಸದ ಈ.ತುಕಾರಾಂ ಹೇಳಿಕೆ






■ **ಹಂಪಿ ಟೈಮ್ಸ್ ಬಳ್ಳಾರಿ**

ಸಾಧನೆಯ ಹಾದಿಯಲ್ಲಿ ಜೀವನ ಸಾಗಿಸಲು ಶ್ರೀಕೃಷ್ಣನ ನ್ಯಾಯ-ನೀತಿಯ ಸಾರವನ್ನು ನಾವೆಲ್ಲರೂ ಪ್ರತಿಪಾದಿಸೋಣ ಎಂದು ಸಂಸದ ಈ.ತುಕಾರಾಂ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಸೋಮವಾರ ಏರ್ಪಡಿಸಿದ್ದ ಶ್ರೀಕೃಷ್ಣ ಜಯಂತ್ಯೋತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದ್ವಾಪರ ಯುಗದ ಮಹಾನ್ ಪುರುಷರಾದ ಶ್ರೀಕೃಷ್ಣನ ಆಶಾಕಿರಣ ಮತ್ತು ಮನೋಭಾವನೆಯನ್ನು ಪಾಲಿಸಿದರೆ, ಪ್ರತಿಯೊಬ್ಬರೂ ಯಶಸ್ಸಿನ ಹೆಜ್ಜೆ ಗುರುತನ್ನು ಕಾಣಬಹುದು ಎಂದು ತಿಳಿಸಿದರು.

ಭೂಮಿ ಮೇಲೆ ಜನಿಸಿ ಸಾಧನೆಗೈದ ಮಹಾತ್ಮರ ಸವಿನೆನಪಿಗಾಗಿ ಹಾಗೂ ಪ್ರತಿ ಸಮುದಾಯದ ಏಳಿಗೆಗಾಗಿ ಘನ ಸರ್ಕಾರವು ಎಲ್ಲಾ ಮಹನೀಯರ ಜಯಂತಿಯನ್ನು ಆಚರಿಸಲಾಗುತ್ತಿದ್ದು, ನಾವೆಲ್ಲರೂ ಸಾಧಕರ ಮಾರ್ಗದಲ್ಲಿ ನಡೆಯಬೇಕು ಎಂದು ಹೇಳಿದರು.

ಸಮಾಜದ ಕಾರ್ಯಗಳು ಮನ್ನಣೆಗೆ ಬರಬೇಕೆಂದರೆ ಉತ್ತಮ ಕಾರ್ಯಗಳ ಜೊತೆಗೆ ಮಹಾನ್ ವ್ಯಕ್ತಿಗಳ ಜೀವನ-ಸಾಧನೆ ಕುರಿತು, ಹಳ್ಳಿ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಜಾಗೃತಿ ಕಾರ್ಯಕ್ರಮಗಳ ಮೂಲಕ ಮಹನೀಯರ ತತ್ವಾದರ್ಶಗಳನ್ನು ಸಾರಬೇಕು ಎಂದು ಪ್ರತಿಪಾದಿಸಿದರು.

ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಮಾತನಾಡಿ, ಅಧರ್ಮ ವಿರುದ್ಧ ನ್ಯಾಯದ ಜಯ ಸಾಧಿಸಲು ಶ್ರೀ ಕೃಷ್ಣ ಪರಮಾತ್ಮನು ಜನಿಸಿದ್ದು, ಧರ್ಮದ ಉಳಿವಿಗಾಗಿ ಶ್ರಮಿಸಿದರು ಎಂದು ತಿಳಿಸಿದರು.

ಭಗವದ್ಗೀತೆಯಲ್ಲಿ ಜೀವನದ ಸಾರಾಂಶ ಅಡಗಿದ್ದು, ಅವುಗಳನ್ನು ಭಕ್ತಿ ಭಾವನೆಯಿಂದ ಅನುಸರಿಸಿ ಉತ್ತಮ ಜೀವನ ನಡೆಸಬೇಕು ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್. ಎನ್ ಅವರು ಮಾತನಾಡಿ, ಸಮಾಜದಲ್ಲಿನ ಅಂಕುಡೊಂಡು ತಿದ್ದಿ, ಜನಸಾಮಾನ್ಯರನ್ನು ಕತ್ತಲಿನಿಂದ ಬೆಳಕಿನೆಡೆಗೆ, ಜ್ಞಾನದಿಂದ ಸುಜ್ಞಾನದ ಕಡೆಗೆ ಕೊಂಡೊಯ್ಯಲು ಮಹಾನ್ ವ್ಯಕ್ತಿಗಳು ಜನಿಸಿದ್ದು, ಅವರನ್ನು ದಾರಿದೀಪವಾಗಿ ಇರಿಸಿಕೊಂಡು, ಸುಸ್ಥಿರ ಸಮಾಜ ನಿರ್ಮಿಸಲು ಪ್ರಮುಖ ಪಾತ್ರ ವಹಿಸಬೇಕು ಎಂದು ಕರೆ ನೀಡಿದರು.

ಪ್ರತಿಯೊಬ್ಬರೂ ಶ್ರೀ ಕೃಷ್ಣನ ಉಪದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗಣ್ಯರೆಲ್ಲರೂ ಶ್ರೀ ಕೃಷ್ಣನ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಎಸ್‌ಜಿಟಿ ಪಿಯು ಕಾಲೇಜಿನ ಕನ್ನಡ ಉಪನ್ಯಾಸಕರಾದ ಅಮಾತಿ ಬಸವರಾಜ ಅವರು ಶ್ರೀಕೃಷ್ಣನ ಜಯಂತಿಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಬಳ್ಳಾರಿಯ ಲಕ್ಷ್ಮೀ ಕಲಾಕ್ಷೇತ್ರ ತಂಡದ ಸಮೂಹ ನೃತ್ಯವು ಮನಮೋಹಕವಾಗಿ ನೆರೆದಿದ್ದವರಿಂದ ಚಪ್ಪಾಳೆ ಗಿಟ್ಟಿಸಿಕೊಂಡರು.

*ಮೆರವಣಿಗೆ:*

ಶ್ರೀ ಕೃಷ್ಣ ಜಯಂತ್ಯೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಶ್ರೀಕೃಷ್ಣನ ಮೂರ್ತಿಯೊಂದಿಗೆ ಮಹಾನಗರ ಪಾಲಿಕೆ ಕಚೇರಿ ಮುಂಭಾಗದಿಂದ ಆರಂಭಗೊಂಡು ವಿವಿಧ ಕಲಾ ತಂಡಗಳ ವಾದ್ಯಗಳೊಂದಿಗೆ ಗಡಿಗಿ ಚೆನ್ನಪ್ಪ ವೃತ್ತ, ಸ್ಟೇಷನ್ ರಸ್ತೆ, ಹೆಚ್.ಆರ್.ಗವಿಯಪ್ಪ ವೃತ್ತದ ಮುಖಾಂತರ ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದವರೆಗೆ ಸಾಗಿ ಬಂದು ಸಂಪನ್ನಗೊಂಡಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್, ಜಿಲ್ಲಾ ಗೊಲ್ಲರ ಸಂಘದ ಅಧ್ಯಕ್ಷ ಹಾಗೂ ಮಹಾನಗರ ಪಾಲಿಕೆಯ ಸಭಾನಾಯಕ ಪಿ.ಗಾದೆಪ್ಪ, ವಕ್ಫ್ ಬೋರ್ಡ್‌ನ ಅಧ್ಯಕ್ಷ ಹುಮಾಯನ್ ಖಾನ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಅಧ್ಯಕ್ಷ ಚಿದಾನಂದಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಮಹಾನಗರ ಪಾಲಿಕೆಯ ಸದಸ್ಯರು, ಸಮಾಜದ ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಮಾನಸ ಚಾರಿಟೇಬಲ್ ವಿದ್ಯಾ ಸಂಸ್ಥೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ

## ಶ್ರೀಕೃಷ್ಣ ರಾಧೆ ವೇಶದಲ್ಲಿ ಕಂಗೊಳಿಸಿದ ಗ್ರಾಮೀಣ ವಿದ್ಯಾರ್ಥಿಗಳು | ಸಂಭ್ರಮಿಸಿದ ಮಕ್ಕಳು



■ **ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ನಾಗೇನಹಳ್ಳಿ ಗ್ರಾಮದ ಮಾನಸ ಚಾರಿಟೇಬಲ್ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು ಶ್ರೀಕೃಷ್ಣ ಜನ್ಮಾಷ್ಟಮಿ ನಿಮಿತ್ತ ಶ್ರೀಕೃಷ್ಣ ರಾಧೆ ವೇಶದಲ್ಲಿ ಭಗವಂತನ ಲೀಲಾವಿಲಾಸವನ್ನು ಪ್ರತಿಬಿಂಬಿಸುವಂತೆ ಆಗಮಿಸಿ ಎಲ್ಲರ ಗಮನ ಸೆಳೆದರು.

ಶಾಲಾ ಮುಖ್ಯಗುರು ನಾಗರತ್ನ ಮಾತನಾಡಿ, ಮಕ್ಕಳು ದೇವರ ಸಮಾನ. ಪುಟಾಣಿ ಮಕ್ಕಳು ಕಿರೀಟ ಧರಿಸಿ, ನವಿಲುಗರಿ, ಮುರಳಿಯನ್ನು ಹಿಡಿದು ಶ್ರೀಕೃಷ್ಣನ ರೂಪದಲ್ಲಿ ಕಂಗೊಳಿಸಿದರೆ, ಪಿಂಗಣಿ ಲೆಹಂಗಾ ಮತ್ತು ಚೋಲಿ, ಉಂಗುರ ಧರಿಸಿ ಉದ್ದನೆ ಜಡೆಯನ್ನು ಮುತ್ತುಗಳಿಂದ ಅಲಂಕರಿಸಿಕೊಂಡು ವಿದ್ಯಾರ್ಥಿನಿಯರು ರಾಧೆಯಂತೆ ಕಾಣಿಸಿಕೊಂಡು ಪಾಲಕರ, ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಮನಗೆದಿದ್ದಾರೆ. ಶ್ರೀಕೃಷ್ಣ ರಾಧೆಯರಂತೆ ಮಕ್ಕಳು ಸಮಾಜಕ್ಕೆ ಮಾದರಿ ವ್ಯಕ್ತಿಗಳಾಗಿ ಬೆಳೆಯಲಿ ಎಂದು ಶುಭಹಾರೈಸಿದರು.

ಶಾಲಾ ಆಡಳಿತ ಮಂಡಳಿ ಕಾರ್ಯದರ್ಶಿ ಟಿ.ಆರ್.ರಾಘವೇಂದ್ರ ಮಾತನಾಡಿ, ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣ ನೀಡುವುದರೊಂದಿಗೆ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಕರು ಶ್ರಮಿಸುತ್ತಿದ್ದಾರೆ. ವಿವಿಧ ಬಣ್ಣದ ಉಡುಪುಗಳಲ್ಲಿ ಮಕ್ಕಳನ್ನು ಸಿದ್ದಗೊಳಿಸಿದ ಪಾಲಕರಿಗೂ ಅಭಿನಂದನೆಗಳನ್ನು ತಿಳಿಸಿದರು. ಇದೇ ಸಂದರ್ಭದಲ್ಲಿ ಪ್ರತಿಭಾಕಾರಂಜಿಯಲ್ಲಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರ ನೀಡಿ ಪುರಸ್ಕರಿಸಲಾಯಿತು. ಮಕ್ಕಳಿಗೆ ಸಿಹಿ ಹಂಚಿ ಸಂಭ್ರಮಿಸಿದರು. ಶಿಕ್ಷಕರಾದ ಇಂದಿರಾ, ಮಂಜುಳಾ, ಪ್ರೀತಿ, ಪಾಲಕರು ಇತರರು ಇದ್ದರು.

# ಅಕ್ಕಿ ಕೊಟ್ರಪ್ಪನವರು ಗಾಂಧಿ-ಬಸವ ತತ್ವ ಅನುಯಾಯಿಗಳು

## ಸಂಡೂರು ಮಠದ ಪ್ರಭುಸ್ವಾಮೀಜಿ ಹೇಳಿಕೆ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಸಾಹಿತ್ಯ, ಧಾರ್ಮಿಕ, ಕಲೆ ಮತ್ತು ಶಿಕ್ಷಣಕ್ಕೆ ತಮ್ಮ ಜೀವನವನ್ನು ಧಾರೆ ಎರೆದವರು ತಂಬ್ರಹಳ್ಳಿಯ ದಿ.ಅಕ್ಕಿ ಕೊಟ್ರಪ್ಪನವರು ಎಂದು ಸಂಡೂರು ವಿರಕ್ತಮಠದ ಪ್ರಭುಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಕಾಯ್ದಿರಿಸಿದ ವೀರಶೈವ ಕಲ್ಯಾಣ ಮಂಟಪದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಘಟಕ ಹಾಗೂ ಬಸವಪಥ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ದಾನ ಶ್ರೇಷ್ಠ ದಿ.ಅಕ್ಕಿ ಕೊಟ್ರಪ್ಪನವರ ಸ್ವರಣಾರ್ಥ ನುಡಿನಮನ ಕಾರ್ಯಕ್ರಮದ ದಿವ್ಯ ಸನ್ನಿಧ್ಯವಹಿಸಿ ಅವರು ಮಾತನಾಡಿದರು. ಸಂಸ್ಕಾರವನ್ನು ಮೈಗೂಡಿಸಿಕೊಂಡಿದ್ದ ಅಕ್ಕಿ ಕೊಟ್ರಪ್ಪನವರ ಅಗಲಿಕೆಯಿಂದ ಸಮಾಜ ಸೊರಗಿದೆ ಎಂದರು. ಕ್ಷೇತ್ರದಲ್ಲಿ ಮಾಜಿ ಶಾಸಕರು ಚನ್ನಬಸವನಗೌಡ್ರು ಸೇರಿದಂತೆ ಅನೇಕ ನಾಯಕರನ್ನು ಬೆಳೆಸಿದರು. ಹೃದಯ ಶ್ರೀಮಂತಿಕೆಯಲ್ಲಿ ಶ್ರೀಮಂತರಾಗಿದ್ದ ಅಕ್ಕಿ ಕೊಟ್ರಪ್ಪನವರು ಬಡ ಮಕ್ಕಳ ಶಿಕ್ಷಣ ಕಾಳಜಿಯನ್ನು ಹೊಂದಿದ್ದರು. ತಮ್ಮ ದುಡಿಮೆಯಲ್ಲಿ ಒಂದಿಷ್ಟು ಸಮಾಜ ಸೇವೆಗೆ ಮೀಸಲಿರಿಸಬೇಕು ಎನ್ನುವ ಹಂಬಲ ವ್ಯಕ್ತ ಪಡಿಸಿದ್ದ ವ್ಯಕ್ತಿಯ ಆದರ್ಶ ಇಂದಿನ ಯುವ ಜನತೆಗಾಗಬೇಕು ಎಂದರು.

ನಂದಿಪುರದ ಮಹೇಶ್ವರ ಸ್ವಾಮೀಜಿ ಮಾತನಾಡಿ, ಮಾತಿನಂತೆ ನಡೆ, ನಡೆದಂತೆ ನುಡಿಯುವ ವ್ಯಕ್ತಿ ನಮ್ಮೊಳಗಿದ್ದವರು ಅಕ್ಕಿ ಕೊಟ್ರಪ್ಪನವರು. ಅವರ ಅಗಲಿಕೆ ಅನೇಕ ಕ್ಷೇತ್ರಗಳು ಅಪಾರ ನಷ್ಠ ಅನುಭವಿಸುವಂತಾಗಿದೆ ಎಂದರು.

ಗ್ರಾಮದವರೇ ಆದ ಸಾಹಿತಿ ಡ.ರಾಮನಮಲಿ ಮಾತನಾಡಿ, ಯಾವುದೇ ಮನುಷ್ಯ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕುವುದು ಸುಲಭವಲ್ಲ. ಬಸವ ತತ್ವಗಳನ್ನು ಗಾಂಧಿಯ ಆದರ್ಶಗಳನ್ನು ಮೈಗೂಡಿಸಿಕೊಂಡು ಬದುಕಿದ್ದವರು ಕೊಟ್ರಪ್ಪನವರು ಎಂದರು.

ಜಿ.ಪಂ.ಮಾಜಿ ಸದಸ್ಯ ಎಚ್.ಬಿ.ನಾಗನಗೌಡ್ರು ಮೌನ ಸಾಧಕ ಅಕ್ಕಿ ಕೊಟ್ರಪ್ಪರ ಸಾಧನೆಗಳನ್ನು ಬಣ್ಣಿಸಿದರು. ವೀರಶೈವ ಸಮಾಜದ ಹಿರಿಯ ಮುಖಂಡ ಬಾವಿ ಬೆಟ್ಟಪ್ಪ, ವಿಜಯನಗರ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಆಪ್ತ ಸಹಾಯಕ ಸುಣಗಾರ್ ಮಂಜುನಾಥ, ಹಿರಿಯ ಸಾಹಿತಿಗಳಾದ ಮೇಟಿ ಕೊಟ್ರಪ್ಪ ಮುಂತಾದವರು ನುಡಿನಮನ ಸಲ್ಲಿಸಿದರು.

ನಂದಿಪುರದ ಡಾ.ಮಹೇಶ್ವರ ಸ್ವಾಮೀಜಿ, ತೋಂಟದಾರ್ಯ ಶಾಖಮಠದ ಬಾಚಿಗೊಂಡನಹಳ್ಳಿ ಶಿವಮಹಾಂತ ಸ್ವಾಮೀಜಿ, ಬಳ್ಳಾರಿ ಕಲ್ಯಾಣ ಸ್ವಾಮೀಜಿ, ಹನಸಿ ಮಠದ ಶಂಕರ ಸ್ವಾಮೀಜಿ, ಉತ್ತಂಗಿ ಮಠದ ಸೋಮೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು.

ಬೆಣ್ಣಿಹಳ್ಳಿ ಪಂಚಾಕ್ಷರಿ ಸ್ವಾಮೀಜಿ, ಮಲ್ಲಾಪುರದ ಯರ್ರಿಸ್ವಾಮೀಜಿ, ಸಾನ್ನಿಧ್ಯ ವಹಿಸಿದ್ದರು. ಅಕ್ಕಿ ಕೊಟ್ರಮ್ಮ, ಪುತ್ರ ಅಕ್ಕಿ ಶಿವಕುಮಾರ್, ಅಕ್ಕಿ ಬಸವರಾಜ್, ಅಕ್ಕಿ ತೋಟೇಶ್, ಪ್ರಮುಖರಾದ ಬಣಜಿಗ ಸಮುದಾಯದ ತಾಲೂಕು ಅಧ್ಯಕ್ಷ ರಾಚಪ್ಪ, ಸುಭಾಷ್ ಶಾಸ್ತ್ರಿಗಳು, ವಾಲ್ಮೀಕಿ ಸಮಾಜದ ಅಧ್ಯಕ್ಷ ವೆಂಕೋಬಪ್ಪ, ವಕೀಲರಾದ ಐಗೋಳ್ ಚಿದಾನಂದ, ಅಟವಾಳಿಗಿ ವೀರಣ್ಣ, ಸೊಬಟಿ ಬಸವರಾಜಪ್ಪ, ಬನ್ನಿಗೋಳ ವೆಂಕಣ್ಣ, ಹೆಗ್ಡಾಳ್ ರಾಮಣ್ಣ, ಭೀಮಣ್ಣ, ಇಟ್ಟಿಗಿ ಕಲ್ಲೇಶಪ್ಪ, ವೈ.ಮಲ್ಲಿಕಾರ್ಜುನ, ಚಿಂತ್ರಪಳ್ಳಿ ದೇವೇಂದ್ರ, ಮರಿರಾಮಪ್ಪ, ಡಿಶ್ ಮಂಜುನಾಥ, ವಿವಿಧ ಸಂಘ ಸಂಸ್ಥೆಗಳ ಹಾಗೂ ವಿವಿಧ ಸಮುದಾಯಗಳ ಪದಾಧಿಕಾರಿಗಳು ಸೇರಿದಂತೆ ವಿವಿ ಸಂಘದ ಕಾಲೇಜ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಈ ವೇಳೆ ಶಾರದ ಮಂಜುನಾಥ, ಸಂಗೀತ ಹಿರೇಮಠ್, ಗುರು ಹಿರೇಮಠ್ ಪ್ರಾರ್ಥಿಸಿದರು. ಗುರು ಬಸವರಾಜ್ ಸೊನ್ನದ್, ಸಂಚಿ ಶಿವಕುಮಾರ್, ಸತೀಶ್ ಪಾಟೀಲ್, ಎಸ್.ವಿಶ್ವನಾಥ ಹಾಗೂ ಸಕ್ರಹಳ್ಳಿ ಕೊಟ್ರೇಶ್ ನಿರ್ವಹಿಸಿದರು.


ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


## ಮೈಕ್ರೋ ನ್ಯೂಸ್

### ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಕೂಡ್ಲಿಗಿ ಶಿಶು ಅಭಿವೃದ್ಧಿ ಯೋಜನೆಯಡಿ ಕೂಡ್ಲಿಗಿ ಹಾಗೂ ಕೊಟ್ಟೂರು ತಾಲೂಕಿನ ವ್ಯಾಪ್ತಿಯ ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಲಿ ಇರುವ 14 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 56 ಅಂಗನವಾಡಿ ಸಹಾಯಕಿಯರ ಗೌರವ ಸೇವೆ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸೆಪ್ಟಂಬರ್ 12 ಕೊನೆಯ ದಿನವಾಗಿದೆ.

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ವೆಬ್‌ಸೈಟ್ https://karnemakaone.kar.nic/abcd/ ಹಾಗೂ ಹೆಚ್ಚಿನ ಮಾಹಿತಿಗಾಗಿ ಕೂಡ್ಲಿಗಿ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಆಯುಷ್ಮಾನ ಆರೋಗ್ಯ ಮಂದಿರಗಳ ರಾಜ್ಯ ಮಟ್ಟದ ಮೌಲ್ಯಮಾಪನ ವರದಿ: ಕೊಪ್ಪಳ ಜಿಲ್ಲೆ ಉತ್ತಮ ಪ್ರಗತಿ

**ಹಂಪಿ ಟೈಮ್ಸ್ ಕೊಪ್ಪಳ:**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ ಬೆಂಗಳೂರು ರಾಜ್ಯ ಕಚೇರಿಯಿಂದ ಪ್ರತಿ ತಿಂಗಳು ಆಯುಷ್ಮಾನ ಆರೋಗ್ಯ ಮಂದಿರಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರದ ವಿವಿಧ ಕಾರ್ಯಕ್ರಮಗಳಡಿಯಲ್ಲಿ ನೀಡುವ ಆರೋಗ್ಯ ಸೇವೆಗಳಾದರಿಸಿ ಪ್ರಾಥಮಿಕ ಆರೋಗ್ಯ ಕೇಂದ್ರ-ಆಯುಷ್ಮಾನ ಆರೋಗ್ಯ ಮಂದಿರಗಳಿಗೆ ಮತ್ತು ಜಿಲ್ಲಾವಾರು ರ್ಯಾಂಕಿಂಗ್ ನೀಡಲಾಗುತ್ತಿದ್ದು, ಇದರಲ್ಲಿ ಕೊಪ್ಪಳ ಜಿಲ್ಲೆಯು ಉತ್ತಮ ಪ್ರಗತಿಯನ್ನು ಸಾಧಿಸಿದೆ.

ಜುಲೈ-2024ರ ಮಾಹೆಯ ರ್ಯಾಂಕಿಂಗ್‌ನಲ್ಲಿ ಜಿಲ್ಲೆಯ ಚಿಕ್ಕೇನಕೊಪ್ಪ ಆಯುಷ್ಮಾನ ಆರೋಗ್ಯ ಮಂದಿರ ಎಲ್ಲಾ ಆರೋಗ್ಯ ಕಾರ್ಯಕ್ರಮಗಳಲ್ಲಿ ಪ್ರತಿಶತ 100 ಗುರಿ ಸಾಧಿಸಿ ರಾಜ್ಯದಲ್ಲಿ ಮೊದಲನೆ ಸ್ಥಾನ ಪಡೆದಿದೆ ಮತ್ತು ಗೊಂಡಬಾಳ ಆಯುಷ್ಮಾನ ಆರೋಗ್ಯ ಮಂದಿರ ಪ್ರತಿಶತ 98 ಗುರಿ ಸಾಧಿಸಿ ರಾಜ್ಯದಲ್ಲಿ 5ನೇ ಸ್ಥಾನ ಪಡೆದಿರುತ್ತದೆ. ಅದೇ ರೀತಿ ಜಿಲ್ಲಾವಾರು ಯಾಂಕಿಂಗ್‌ನಲ್ಲಿ ಕೊಪ್ಪಳ ಜಿಲ್ಲೆಯು 4ನೇ ಸ್ಥಾನ ಪಡೆದಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಸತಿ ನಿಲಯಗಳಿಗೆ ಬಾಡಿಗೆ ಕಟ್ಟಡ ಬೇಕಾಗಿದೆ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ತಾಲೂಕು ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಬಾಡಿಗೆ ಕಟ್ಟಡ ಬೇಕಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಗ್ರೇಡ್-1 ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಕೊಪ್ಪಳ ತಾಲೂಕು ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿ ನಿಲಯಗಳಲ್ಲಿ ಮಂಜೂರಾತಿ ಸಂಖ್ಯೆಗಿಂತ ಹೆಚ್ಚುವರಿ ವಿದ್ಯಾರ್ಥಿಗಳು ಪ್ರವೇಶ ಪಡೆದಿರುವುದರಿಂದ ಕೊಪ್ಪಳದ ಸರ್ಕಾರಿ ಮೆಟ್ರಿಕ್ ನಂತರದ ಬಾಲಕೀಯರ ವಸತಿ ನಿಲಯ (ಪ.ವರ್ಗ), ವಸತಿ ನಿಲಯಕ್ಕೆ ಕೊಪ್ಪಳದಲ್ಲಿ ಬಾಡಿಗೆ ಕಟ್ಟಡಗಳ ಅವಶ್ಯಕತೆ ಇದ್ದು, ಆಸಕ್ತ ಖಾಸಗಿ ಕಟ್ಟಡದ ಮಾಲೀಕರು ಹೊಸ ಆರ್.ಟಿ.ಓ ಕಚೇರಿ ಹತ್ತಿರವಿರುವ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ ಕೊಪ್ಪಳ ರವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ವಿಜ್ಞಾನ

# ಕೆಲವು ಸಸ್ಯಗಳು ಏಕೆ ಮುಳ್ಳುಗಳನ್ನು ಹೊಂದಿವೆ?

■ ಆರ್.ಬಿ.ಗುರುಬಸವರಾಜ

ಮನೆಯ ಕೈತೋಟದಲ್ಲಿದ್ದ ಅರಳಿದ್ದ ಗುಲಾಬಿ ಹೂವು ಸುಂದರವಾಗಿ ಕಾಣುತ್ತಿತ್ತು. ಅದನ್ನು ನೋಡಿದ ಪ್ರಾರ್ಥನಾಳಿಗೆ ಮುಡಿಯುವ ಆಸೆಯಾಯಿತು. ಗುಲಾಬಿ ಹೂವನ್ನು ಕೀಳಲು ಗಿಡಕ್ಕೆ ಕೈಹಾಕಿದಳು ಮತ್ತು ಅಷ್ಟೇ ವೇಗವಾಗಿ 'ಹ್ಹಾ...' ಎನ್ನುತ್ತಾ ಕೈಹಿಂತೆಗೆದುಕೊಂಡಳು. ಅಲ್ಲಿಯೇ ಇದ್ದ ಸಹೋದರ ವಿಶ್ವಾಸ ಇದನ್ನು ಗಮನಿಸಿದ. 'ಏನಾಯ್ತು?' ಎಂದ. "ಗುಲಾಬಿ ಗಿಡದ ಮುಳ್ಳು ಕೈಗೆ ಚುಚ್ಚಿತು" ಎಂದಳು. 'ಹುಷಾರಾಗಿ ಕೀಳೋದು ತಾನೆ' ಎಂದು ಹೇಳಿ ಗಿಡದಿಂದ ಹೂವನ್ನು ಕಿತ್ತು ಕೊಟ್ಟ. "ಅಣ್ಣ ಎಲ್ಲಾ ಸಸ್ಯಗಳು ಮುಳ್ಳುಗಳನ್ನು ಹೊಂದಿಲ್ಲ. ಆದರೆ ಕೆಲವೇ ಸಸ್ಯಗಳು ಏಕೆ ಮುಳ್ಳುಗಳನ್ನು ಹೊಂದಿವೆ?" ಎಂದಳು. ಅದಕ್ಕೆ ಅಣ್ಣನ ಉತ್ತರ ಹೀಗಿದೆ.



ಕೆಲವು ಸಸ್ಯಗಳು ಸಸ್ಯಾಹಾರಿ ಮತ್ತು ಇತರ ಪ್ರಾಣಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ರಕ್ಷಣಾತ್ಮಕ ರೂಪಾಂತರವಾಗಿ ಮುಳ್ಳುಗಳನ್ನು ಹೊಂದಿವೆ. ಮುಳ್ಳುಗಳು ಪ್ರಾಣಿಗಳು ಸಸ್ಯವನ್ನು ಸಮೀಪಿಸುವುದನ್ನು ಮತ್ತು ಸ್ಪರ್ಶಿಸುವುದನ್ನು ತಡೆಯಬಹುದು. ಮುಳ್ಳುಗಳು ಸಸ್ಯದ ಎಲೆಗಳು, ಕಾಂಡಗಳು ಮತ್ತು ಹೂವುಗಳಿಗೆ ಹಾನಿಯಾಗದಂತೆ ತಡೆಯುತ್ತದೆ ಮತ್ತು ಸಸ್ಯದ ಹಣ್ಣುಗಳು ಮತ್ತು ಬೀಜಗಳನ್ನು ಪ್ರಾಣಿಗಳು ಸೇವಿಸುವುದನ್ನು ತಡೆಯಬಹುದು.

ಮುಳ್ಳುಗಳು ಸಸ್ಯಗಳ ನಡುವಿನ ಸ್ಪರ್ಧೆಯ ಸಾಧನವಾಗಿ ಕಾರ್ಯನಿರ್ವಹಿಸುತ್ತವೆ. ನೀರು ಅಥವಾ ಪೋಷಕಾಂಶಗಳಂತಹ ಸೀಮಿತ ಸಂಪನ್ಮೂಲಗಳನ್ನು ಹೊಂದಿರುವ ಪ್ರದೇಶಗಳಲ್ಲಿ, ಇತರ ಸಸ್ಯಗಳು ತಮ್ಮ ಸ್ಥಳ ಮತ್ತು ಸಂಪನ್ಮೂಲಗಳನ್ನು ಅತಿಕ್ರಮಿಸುವುದನ್ನು ತಡೆಯಲು ಸಸ್ಯಗಳು ಮುಳ್ಳುಗಳನ್ನು ಬಳಸಬಹುದು. ಉದಾಹರಣೆಗೆ ಮರುಭೂಮಿಯಂತಹ ಸೀಮಿತ ನೀರಿನ ಸಂಪನ್ಮೂಲ ಹೊಂದಿದ ಪ್ರದೇಶಗಳ ಸಸ್ಯಗಳು ಮುಳ್ಳುಗಳನ್ನು ಹೊಂದಿರುತ್ತವೆ.

ಮೊನಚಾದ ರಚನೆಗಳನ್ನು ಹೊಂದಿರುವ ಎಲ್ಲಾ ಸಸ್ಯಗಳು ಮುಳ್ಳಿನಿಂದ ಕೂಡಿರುವುದಿಲ್ಲ ಎಂಬುದನ್ನು ಗಮನಿಸುವುದು ಮುಖ್ಯ. ಕೆಲವು ಸಸ್ಯಗಳಲ್ಲಿ ಮುಳ್ಳುಗಳು ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತವೆ. ಉದಾಹರಣೆಗೆ ಪಾಪಾಸುಕಳ್ಳಿಯಂತಹ ಕ್ಯಾಕ್ಟಸ್ ಜಾತಿಗೆ ಸೇರಿದ ಸಸ್ಯಗಳಲ್ಲಿ ನೀರಿನ ನಷ್ಟವನ್ನು ಕಡಿಮೆ ಮಾಡಲು ಮತ್ತು ಪರಭಕ್ಷಕಗಳಿಂದ ರಕ್ಷಿಸಲು ಮುಳ್ಳುಗಳು ಸಹಾಯ ಮಾಡುತ್ತವೆ. ಗುಲಾಬಿಯಂತಹ ಹೂವಿನ ಸಸ್ಯದಲ್ಲಿ ಸಸ್ಯಾಹಾರಿಗಳನ್ನು ದೂರವಿಡಲು ಮುಳ್ಳುಗಳನ್ನು ಹೊಂದಿರುತ್ತವೆ. ಮುಳ್ಳುಗಳು ಭೌತಿಕ ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತವೆ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಕೃಷ್ಣನ ಹೆಸರೇ ಲೋಕಪ್ರಿಯ ಮತ್ತು ಕೃಷ್ಣಪ್ರಜ್ಞೆ



**ಕೃಷ್ಣ** ಜಯಂತಿ..... ಕೃಷ್ಣಾಷ್ಟಮಿ. ಎಲ್ಲ ಸುಮಂಗಲಿಯರು ಬಾಲಕೃಷ್ಣನನ್ನು ಪೂಜಿಸಿ ಅಲಂಕರಿಸಿದ ತೊಟ್ಟಿಲಲ್ಲಿ ಹಾಕಿ ತೂಗಿ ಪೂಜಿಸಿ ಆತನಿಗೆಂದೇ ನೂರೆಂಟು ಬಗೆಯ ಸಿಹಿಕಾರದ ತಿಂಡಿಗಳನ್ನು ಮಾಡಿ ನೈವೇದ್ಯವನ್ನು ಅರ್ಪಿಸುತ್ತಾರೆ. ಸಣ್ಣ ಮಕ್ಕಳಿರುವ ತಾಯಂದಿರು ತಮ್ಮ ಮಕ್ಕಳನ್ನು ಕೃಷ್ಣನ ವೇಷದ ವಿವಿಧ ಬಗೆಯ ರೂಪಗಳಲ್ಲಿ ಅಲಂಕರಿಸಿ ಸಂಭ್ರಮಿಸುತ್ತಾರೆ. ಮತ್ತೆ ಕೆಳಗಡೆ ಕೃಷ್ಣನ ವೇಷ ಧರಿಸಿದ ಮಕ್ಕಳಿಗಾಗಿ ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ. ಉತ್ತರ ಭಾರತದಲ್ಲಂತೂ ಕೃಷ್ಣನ ಎಲ್ಲ ದೇವಸ್ಥಾನಗಳಲ್ಲಿ ಶ್ರದ್ಧೆ ಭಕ್ತಿಗಳಿಂದ ಕೃಷ್ಣನನ್ನು ಪೂಜಿಸಿ ಆರಾಧಿಸುತ್ತಾರೆ. ಅವರೆಲ್ಲರಿಗೂ ಕೃಷ್ಣ ಭಕ್ತಿ ವೈರಾಗ್ಯ ಜ್ಞಾನಗಳ ಸಂಕೇತವಾಗಿ ತೋರುತ್ತಾನೆ. ಕೃಷ್ಣನ ಭಜನೆ ಕೀರ್ತನೆಗಳಲ್ಲಿ ತೊಡಗಿಕೊಳ್ಳುವ ಜನರು ಮೊಸರು ಗಡಿಗೆ ಆಟವನ್ನು ಆಡುತ್ತಾರೆ. ರಾತ್ರಿ ಇಡೀ ಕೃಷ್ಣನ ಸಂಕೀರ್ತನೆ ನಡೆಯುತ್ತದೆ. ಕೃಷ್ಣನ ಬಾಲ ಲೀಲೆಗಳನ್ನು ನಾಟಕ,ನೃತ್ಯಗಳಲ್ಲಿ ಅಭಿನಯಿಸುತ್ತಾರೆ. ಆದರೆ ನಾವು ಕೃಷ್ಣನನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದೇವೆಯೇ ಎಂದು ಕೇಳಿದರೆ ಉಹೂಂ !! ಖಂಡಿತವಾಗಿಯೂ ಇಲ್ಲ.

ಸೆರೆಮನೆಯಲ್ಲಿ ಜನಿಸಿದ ಕೃಷ್ಣ, ಬೆಣ್ಣೆ ಕದ್ದ ಕೃಷ್ಣ, ನಾರಿಯರ ಸೀರೆ ಕದ್ದ ಕೃಷ್ಣ, 16,000 ಹೆಂಡಂದಿರನ್ನು ಹೊಂದಿದ ಕೃಷ್ಣ, ಸ್ತ್ರೀಲೋಲನಾದ ಕೃಷ್ಣ ಎಂದು ಕೃಷ್ಣನನ್ನು ಹೀಗಳೆಯುವುದೇ ಹೆಚ್ಚು. ಆದರೆ ಭಗವಾನ್ ಶ್ರೀ ಕೃಷ್ಣ... ವಿಷ್ಣುವಿನ ಅವತಾರ. ಹಲವಾರು ರಾಕ್ಷಸರನ್ನು ಕೊಲ್ಲುವ ಉದ್ದೇಶದಿಂದಲೇ ಈ ಧರೆಯಲ್ಲಿ ಜನಿಸಿದವ. ದುಷ್ಟ ಶಿಕ್ಷಣ ಶಿಷ್ಟ ರಕ್ಷಣೆಗಾಗಿ ಅವತಾರವೆತ್ತಿದವ. ನ್ಯಾಯಾನ್ಯಾಯ, ಸರಿ ತಪ್ಪುಗಳ ಅರಿತವ, ಪ್ರೀತಿ ಪ್ರೇಮಗಳ ಮಾಧುರ್ಯವನ್ನು ತಿಳಿಸಿಕೊಟ್ಟವ, ಕರ್ತವ್ಯಕ್ಕಾಗಿ ತ್ಯಾಗವನ್ನು ಮಾಡಬೇಕೆಂದು ಹೇಳಿಕೊಟ್ಟ ಆತ ಕಾಲವನ್ನು ಮೀರಿದ ಕಾಲಾತೀತ, ಗುಣಗಳನ್ನು ಮೀರಿದ ಗುಣಾತೀತನವ.

ಕೃಷ್ಣ ಎಂಬ ಮನೋವಿಜ್ಞಾನಿ.... ಕುರುಕ್ಷೇತ್ರ ಯುದ್ಧದ ಮೊದಲ ದಿನ ಅರ್ಜುನ ಯುದ್ಧದಲ್ಲಿ ತನ್ನ ಎದುರಾಳಿಗಳಲ್ಲಿರುವ ತನ್ನೆಲ್ಲ ಸಂಬಂಧಿಕರನ್ನು ಕಂಡು ಹಿಂಜರಿದು ಯುದ್ಧ ಮಾಡಲು ಮನಸೊಪ್ಪದೆ ಹಿಮ್ಮೆಟ್ಟಿದಾಗ ಧರ್ಮ ಮತ್ತು ಅಧರ್ಮಗಳ ನಡುವಿನ ವ್ಯತ್ಯಾಸವನ್ನು ತಿಳಿಹೇಳಿ, ಲಾಭಾಲಾಭ ಜಯಾಪಜಯಗಳನ್ನು ತಿಳಿ ಹೇಳಿ ಜಗತ್ತಿನ ಎಲ್ಲ ಜಂಜಡಗಳನ್ನು ಹೇಗೆ ಎದುರಿಸಬೇಕು, ನಿರ್ಲಿಪ್ತತೆಯಿಂದ ಹೇಗೆ ಬದುಕಬೇಕು, ಹಿಂಸೆ ಅಹಿಂಸೆಗಳ ನಡುವಿನ ವ್ಯತ್ಯಾಸವನ್ನು ಹೇಗೆ ಅರಿಯಬೇಕು, ಭಕ್ತಿ ಸಿದ್ಧಾಂತ,ಕರ್ಮ ಸಿದ್ಧಾಂತ, ಜ್ಞಾನ ಸಿದ್ಧಾಂತ ಮತ್ತು ಯೋಗ ಸಿದ್ಧಾಂತಗಳನ್ನು ಭಗವದ್ಗೀತೆಯ ಮೂಲಕ ಬೋಧಿಸಿದ ಜಗತ್ತಿನ ಮತ್ತು ಮೊದಲ ಮನೋವಿಜ್ಞಾನಿ ಕೃಷ್ಣ.

ಜಗತ್ತಿನ ವಿವಿಧೆಡೆಗಳಲ್ಲಿ ಜನರು ಇನ್ನೂ ಕಣ್ತೆರೆದು ಎದ್ದು ಕುಳಿತಿರುವಾಗಲೇ ಭಗವದ್ಗೀತೆಯಂತಹ ಶ್ರೇಷ್ಠ ಜ್ಞಾನವನ್ನು ನೀಡಿದ ಕೃಷ್ಣನ ಭಗವದ್ಗೀತೆಯ ಜ್ಞಾನ ಸಾರ್ವಕಾಲಿಕ ಸತ್ಯವಾಗಿ ಪರಿಣಮಿಸಿದೆ. ಕೇವಲ ಅದನ್ನು ಪಠಿಸಿದರೆ ಸಾಲದು... ನಮ್ಮ ಜೀವನದಲ್ಲಿಯೂ ಅಳವಡಿಸಿಕೊಳ್ಳಬೇಕು ಎಂಬುದನ್ನು ನಾವು ಅರಿಯಬೇಕು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಕೃಷ್ಣ ಎಂಬ ಜಗದ್ರಕ್ಷಕ.... ಪೂತನಿ, ಶಕಟಾಸುರ, ಕಂಸ,ಜರಾಸಂಧರಂತಹ ರಾಕ್ಷಸರನ್ನು ಕೊಂದು,ಆ ಮೂಲಕ ದುಷ್ಟ ಶಿಕ್ಷಣವನ್ನು ಮಾಡುವ ಮಹದುದ್ದೇಶದಿಂದ ಈ ಭೂಮಿಯಲ್ಲಿ ಅವತರಿಸಿದಅವತಾರಪುರುಷ ಕೃಷ್ಣ ನೂರೆಂಟು ತಪ್ಪುಗಳನ್ನು ಮಾಡಿದ ಶಿಶುಪಾಲನ ಶಿರವನ್ನು ತನ್ನ ಸುದರ್ಶನ ಚಕ್ರದಿಂದ ಕತ್ತರಿಸಿ ಹಾಕದೇ ಬಿಡಲಿಲ್ಲ. ಪಾಂಡವರೆಂಬ ಶಿಷ್ಟರನ್ನು ರಕ್ಷಿಸಿ ಕೌರವರೆಂಬ ದುಷ್ಟರನ್ನು ಶಿಕ್ಷಿಸಲು ಅಸ್ತ್ರವಾಗಿ ಬಳಸಿದ. ಧರ್ಮದ ಸ್ಥಾಪನೆಗೆ ಕಂಕಣಬದ್ಧನಾಗಿ ಕಾರ್ಯನಿರ್ವಹಿಸಿದ.

ನಮ್ಮ ದೇಹವನ್ನು ಮುಚ್ಚಿರುವ ಬಟ್ಟೆಗಳ ಕುರಿತಾದ ನಗ್ನ ಸತ್ಯವನ್ನು ಜಗತ್ತಿಗೆ ವಿವರಿಸಲು, ಕೇವಲ ಬಾಹ್ಯ ಸೌಂದರ್ಯವೊಂದೇ ಸೌಂದರ್ಯದ ಅಳತೆಗೋಲಲ್ಲ ಎಂದು ಆತ್ಮದ ಸೌಂದರ್ಯದಲ್ಲಿ ಆಧ್ಯಾತ್ಮಿಕತೆ ಮಿಳಿತವಾಗಿರಬೇಕು ಎಂದು ಸೂಕ್ಷ್ಮವಾಗಿ ಹೇಳಿಕೊಟ್ಟವನು ಶ್ರೀ ಕೃಷ್ಣ.

ಕೃಷ್ಣ ಎಂಬ ಪ್ರೇಮಮಯಿ....ನಮ್ಮ ಇಂಗ್ಲಿಷ್ ಕಾವ್ಯಗಳಲ್ಲಿ ಹೇಳಲ್ಪಡುವ ಪ್ಲೆಟಾನಿಕ್ ಲವ್ ಎಂಬ ಪ್ರೀತಿಯನ್ನು ಸಾವಿರಾರು ವರ್ಷಗಳ ಹಿಂದೆಯೇ ತೋರಿದ ಶ್ರೀ ಕೃಷ್ಣ ಗಂಡು ಹೆಣ್ಣಿನ ನಡುವಿನ ಪ್ರೀತಿ ಪ್ರೇಮಗಳು ದೈಹಿಕವಾದುದಲ್ಲ... ಅವು ಸಂಪೂರ್ಣ ಮಾನಸಿಕವಾದ, ಪರಮ ಪವಿತ್ರವಾದ ದೈವಿಕ ಭಾವ ಎಂದು ತೋರಿದನು. ಪ್ರೇಮವೆಂಬುದು ಆಧ್ಯಾತ್ಮಿಕತೆಯ ಮೊದಲ ಮೆಟ್ಟಿಲು ಎಂಬುದನ್ನು ಜಗತ್ತಿಗೆ ತೋರಿಸಿ ಕೊಟ್ಟವನು ಕೃಷ್ಣ.

ಕೃಷ್ಣ ಎಂಬ ದೀನಬಂಧು.... ಕೃಷ್ಣ ಗೋಕುಲವಾಸಿಯಾಗಿದ್ದಾಗ ತನ್ನ ಸಹವರ್ತಿಗಳನ್ನು ಕಾಪಾಡಲು ಕಾಳಿಂಗ ಸರ್ಪವನ್ನು ಮರ್ದಿಸಿದಾತ. ಬಿಡದೆ ಸುರಿಯುತ್ತಿದ್ದ ಮಳೆಯಿಂದ ರಕ್ಷಿಸಲು ಗೋವುಗಳನ್ನು ಮತ್ತು ಗೋಪಾಲಕರನ್ನು ಗೋವರ್ಧನಗಿರಿಯನ್ನು ತನ್ನ ಕಿರು ಬೆರಳಲ್ಲಿ ಎತ್ತಿ ಹಿಡಿದಾತ.

ಸಾಂದೀಪನಿ ಮಹರ್ಷಿಗಳ ಗುರುಕುಲದ ಒಡನಾಡಿ ಸುಧಾಮ ಅತ್ಯಂತ ಬಡತನದಿಂದ ಬಳಲುತ್ತಿದ್ದು ತನ್ನ ಪತ್ನಿಯ ಸಲಹೆಯಂತೆ ರಾಜನಾದ ಶ್ರೀ ಕೃಷ್ಣನ ಬಳಿ ಬಂದಾಗ ಸ್ನೇಹಿತನಾದ ಬಡ ಬ್ರಾಹ್ಮಣ ಸುಧಾಮನ ಪಾದಗಳನ್ನು ಸಪತ್ನಿಕನಾಗಿ ತೊಳೆದು ಅರ್ಘ್ಯವನ್ನಿತ್ತು ಭೂರಿ ಭೋಜನವನ್ನು ಮಾಡಿಸಿದನು. ರಾಜನಾಗಿದ್ದರು ವಿರಾಮದಿಂದ ಕುಳಿತು ಬಾಲ್ಯದ ಸವಿ ನೆನಪುಗಳನ್ನು ನೆನೆದನು.ಸ್ನೇಹಿತನ ಪ್ರೀತಿ ಕಂಡು ಪರವಶನಾದ ಸುಧಾಮ ಏನನ್ನೂ ಕೇಳದೆಯೇ ಹಿಂತಿರುಗಿದರೆ, ಆತನಿಗೆ ಎಲ್ಲವನ್ನು ದಯಪಾಲಿಸಿದ್ದ ಶ್ರೀಕೃಷ್ಣ 'ಹೇಳದೆಯೇ ಮಾಡುವವನು ರೂಢಿಯೊಳಗುತ್ತಮನು' ಎಂದು ಜಗತ್ತಿಗೆ ಸಾರಿ ಹೇಳಿದನು.

ಕೃಷ್ಣ ಎಂಬ ಸ್ತ್ರೀ ರಕ್ಷಕ....ಪ್ರೀತಿಯಲ್ಲಿರುವ ಅದಮ್ಯ ಶಕ್ತಿಯನ್ನು, ಪ್ರೀತಿಸುವ ಜೀವವನ್ನು ರಕ್ಷಿಸುವ, ಭದ್ರತೆ ಮತ್ತು ಭರವಸೆಗಳನ್ನು ನೀಡುವ ಅವಶ್ಯಕತೆಯನ್ನು ಮನಗೊಂಡು ರಾಕ್ಷಸನ ಸಂಹಾರ ಮಾಡಿ ಆತನಿಂದ ಬಂಧಿತರಾದ ಹದಿನಾರು ಸಾವಿರ ಕನ್ಯೆಯರನ್ನು ಬಿಡುಗಡೆಗೊಳಿಸಿ ಅವರವರ ಪಾಲಕರ ಬಳಿ ಕಳುಹಿಸಲು ಸಜ್ಜಾದ ಶ್ರೀ ಕೃಷ್ಣ, ನಂತರ ಆ 16000 ಕನ್ಯೆಯರ ಅಪೇಕ್ಷೆಯಂತೆ ಅವರೊಂದಿಗೆ ದೈವಿಕ ವಿವಾಹ ಸಂಬಂಧವನ್ನು ಹೊಂದಿ ಭದ್ರತೆಯನ್ನು ಒದಗಿಸಿದ ಸ್ತ್ರೀ ರಕ್ಷಕ ಅಲ್ಲವೇ?

ಕೃಷ್ಣ ಎಂಬ ಧರ್ಮರಕ್ಷಕ.... "ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ... ಅಭ್ಯುತ್ಥಾನಂ ಅಧರ್ಮಸ್ಯ ತದಾತ್ಮಾನಾಮ್ ಸೃಜಾಮ್ಯಹಮ್" ಎಂದು ಗೀತೆಯಲ್ಲಿ ಆತನೇ ಬೋಧಿಸಿರುವಂತೆ ಕೃಷ್ಣ ಎಲ್ಲೆಲ್ಲಿ ಅಧರ್ಮಗಳು ನಡೆಯುತ್ತಿವೆಯೋ ಅಲ್ಲೆಲ್ಲ ಅವತರಿಸಿ ಧರ್ಮವನ್ನು ಎತ್ತಿ ಹಿಡಿದಾತ.

ಕ್ಷತ್ರಿಯರ ಕ್ರೀಡೆಯಾದ ಜೂಜಿನಲ್ಲಿ ದ್ರೌಪದಿಯನ್ನು ಪಣಕ್ಕಿಟ್ಟು ಸೋತ ಪಾಂಡವರು ದುಶ್ಯಾಸನನು ದ್ರೌಪದಿಯ ಸೀರೆಯನ್ನು ಸೆಳೆಯುವಾಗತಲೆಕೆಳಗೆಹಾಕಿದ್ದರೆ,ಭೀಷ್ಮದ್ರೋಣಾಚಾರ್ಯರಂತಹ ಹಿರಿಯರು ಅಸಹಾಯಕರಾಗಿದ್ದರು. ಧೃತರಾಷ್ಟ್ರ ಮೌನವಾಗಿದ್ದರೆ ಸಭಿಕರು ದಿಗ್ಮೂಢರಾಗಿ ನಿಂತಿದ್ದರು. ದ್ರೌಪದಿಯ ಮೊರೆ ಕೇಳಿ ಆಕೆಗೆ ಅಕ್ಷಯಂಬರವನ್ನು ದಯಪಾಲಿಸಿ ಆಕೆಯ ಮಾನವನ್ನು ಉಳಿಸಿದಾತ ಆಕೆಯನ್ನೂ, ಧರ್ಮವನ್ನೂ ರಕ್ಷಿಸಿದಾತ ಕೃಷ್ಣ. ತನ್ನ ತಂಗಿ ಸುಭದ್ರೆಯ ಇಚ್ಛೆಗೆ ವಿರುದ್ಧವಾಗಿ ಅಣ್ಣ ಬಲರಾಮ ಆಕೆಯ ವಿವಾಹವನ್ನು ಮಾಡಲಿಚ್ಛಿಸಿದಾಗ ಸುಭದ್ರೆ ಗುಟ್ಟಾಗಿ ಆರಾಧಿಸುತ್ತಿದ್ದ ಅರ್ಜುನನೊಂದಿಗೆ ಕ್ಷಾತ್ರ ಧರ್ಮಾನುಸಾರವಾಗಿ ವಿವಾಹವಾಗಲು ಪ್ರೋತ್ಸಾಹಿಸಿ ಅವರನ್ನು ಒಂದಾಗಿಸಿದಾತ ಕೃಷ್ಣ.

ರಾಜಕೀಯ ಚತುರ/ ಸಂಧಾನಕಾರ ಕೃಷ್ಣ.... ಒಳ್ಳೆಯ ರಾಜನೀತಿ ಪರಿಣತಜ್ಞನಾಗಿದ್ದ ಕೃಷ್ಣ ಹಲವಾರು ರಾಜಕೀಯ ಸಮಸ್ಯೆಗಳನ್ನು ತನ್ನ ಚಾಣಾಕ್ಷತೆಯಿಂದ ಬಗೆಹರಿಸಿದ್ದನು. ಕೌರವ ಪಾಂಡವರ ನಡುವೆ ಸಂಧಾನಕಾರನಾಗಿ ಬಂದ ಕೃಷ್ಣ ಸ್ಥಿತಪ್ರಜ್ಞನಾಗಿ ತನ್ನ ಕರ್ತವ್ಯ ನಿರ್ವಹಿಸಿದನಲ್ಲದೆ, ಮಧ್ಯಸ್ಥಿಕೆ ವಹಿಸಿದ ತಾನು ಕೌರವರ ಆಸ್ಥಾನದಲ್ಲಿ ಉಳಿಯುವುದು ಉಚಿತವಲ್ಲ ಎಂದು ಭಾವಿಸಿ ವಿದುರನ ಮನೆಯಲ್ಲಿ ತಂಗಿದನು.

ಅಹಿಂಸೆ ಪರಮಧರ್ಮ, ಆದರೆ ಹಿಂಸೆಯನ್ನು ಸಹಿಸಿಕೊಳ್ಳುವುದು ಅದಕ್ಕಿಂತಲೂ ಘೋರವಾದ ತಪ್ಪು ಎಂದು ಸಾರಿದ ಕೃಷ್ಣ ಧರ್ಮ ಸೂಕ್ಷ್ಮವನ್ನು, ರಾಜಕೀಯ ಚತುರತೆಯನ್ನು ಅರಿತವನಾಗಿದ್ದ.

ಕೃಷ್ಣನ ಹಲವಾರು ಚಾಣಾಕ್ಷ ನಡೆಗಳು ಪಾಂಡವರನ್ನು ಅಪಾಯದಿಂದ ತಪ್ಪಿಸಿದವು. ಪಾಂಡವರನ್ನು ಲಾಕ್ಷಾಗೃಹದಲ್ಲಿ ದಹಿಸಬೇಕೆಂಬ ಕುರು ರಾಜಕುಮಾರ ದುರ್ಯೋಧನನ ಕುತಂತ್ರವನ್ನು ಅರಿತ ಕೃಷ್ಣ ವಿದುರನ ಮೂಲಕ ಅವರನ್ನು ಉಪಾಯದಿಂದ ಪಾರು ಮಾಡಿದ. ದ್ರೌಪದಿಗೆ ಅಕ್ಷಯ ಪಾತ್ರೆಯನ್ನು ನೀಡಿ ಹರಸಿದ ಕೃಷ್ಣ ಅರಣ್ಯದಲ್ಲಿದ್ದರೂ ಪಾಂಡವರು ಅತಿಥಿ ಸತ್ಕಾರ ಮಾಡಲು ತೊಂದರೆ ಇಲ್ಲದಂತೆ ಅನುಗ್ರಹಿಸಿದ್ದನು. ಅರ್ಜುನನು ಮತ್ಸ್ಯಯಂತ್ರವನ್ನು ಭೇದಿಸುವಾಗ ಹರಿಯುತ್ತಿದ್ದ ನೀರಿನ ಚಲನೆಯನ್ನು ನಿಲ್ಲಿಸಿದಾತ ಕೃಷ್ಣ. ಕುರುಕ್ಷೇತ್ರ ಯುದ್ಧದಲ್ಲಿ ದ್ರೋಣ, ಭೀಷ್ಮರನ್ನು ಸೋಲಿಸಲು ಚಾಣಾಕ್ಷ ನಡೆಯನ್ನು ಅನುಸರಿಸಿದ ಕೃಷ್ಣ ಕರ್ಣನ ಸೋಲಿಗೂ ಕಾರಣನಾಗಿದ್ದ.

ಯುದ್ಧ ಪೂರ್ವದಲ್ಲಿ ತನ್ನ ಕರ್ತವ್ಯವನ್ನು ಸ್ಥಿತಪ್ರಜ್ಞನಾಗಿ ನಿರ್ವಹಿಸು ಎಂದು ಅರ್ಜುನನಿಗೆ ಕರೆ ನೀಡಿದ, ತನ್ನ ವಿಶ್ವರೂಪವನ್ನು ತೋರಿಸಿ ಜಗತ್ತಿನ ಸರ್ವ ಚರಾಚರಗಳು ತನ್ನಿಂದಲೇ ಆಗಿವೆ ತಾನೇ ಸೃಷ್ಟಿಕರ್ತನು ಸ್ಥಿತಿ ಕರ್ತನು ಲಯ ಕರ್ತನು ಆಗಿದ್ದು ಎಲ್ಲವೂ ತನ್ನಿಂದಲೇ ಜನಿಸಿ ತನ್ನಲ್ಲೇ ಲೀನವಾಗುತ್ತವೆ ಎಂಬ ಸತ್ಯವನ್ನು ಅರುಹಿದ ಕೃಷ್ಣ ಯುದ್ಧದಲ್ಲಿ ಗೆದ್ದ ನಂತರ ಸ್ನೇಹಿತ ಅರ್ಜುನನಲ್ಲಿ ಉಂಟಾದ ಅಹಂ ಭಾವವನ್ನು ತೊಡೆದು ಹಾಕಿದನು ಕೂಡ.

ಯುದ್ಧ ನಂತರ ಪಾಂಡವರು ಧೃತರಾಷ್ಟ್ರನನ್ನು ಭೇಟಿಯಾಗಲು ಹೋದಾಗ ತನ್ನೆಲ್ಲಾ ಮಕ್ಕಳನ್ನು ಕೊಂದ ಭೀಮನನ್ನು ಆಲಂಗಿಸುವ ಇಚ್ಛೆಯನ್ನು ಧೃತರಾಷ್ಟ್ರ ವ್ಯಕ್ತಪಡಿಸಿದಾಗ, ಆತನಿಂದ ಭೀಮನಿಗೆ ಒದಗುವ ತೊಂದರೆಯನ್ನು ಅರಿತ ಕೃಷ್ಣ ಉಪಾಯವಾಗಿ ದುರ್ಯೋಧನನು ತನ್ನ ಅಭ್ಯಾಸಕ್ಕಾಗಿ ಬಳಸುತ್ತಿದ್ದ ಭೀಮನ ಉಕ್ಕಿನ ಪ್ರತಿ ಕೃತಿಯನ್ನು ಧೃತರಾಷ್ಟ್ರನ ಮುಂದೆ ತಳ್ಳಿದನು. ಧೃತರಾಷ್ಟ್ರನ ಆಕ್ರೋಶದ ಬಲಿಷ್ಠ ಆಲಿಂಗನಕ್ಕೆ ಆ ಉಕ್ಕಿನ ಪ್ರತಿ ಕೃತಿ ನುಚ್ಚು ನೂರಾದದ್ದನ್ನು ಕಂಡು ಎಲ್ಲರೂ ಬೆಚ್ಚಿ ಬಿದ್ದರೆ ಪಾಂಡವರು ಭೀಮನನ್ನು ಉಳಿಸಿದ ಕೃಷ್ಣನನ್ನು ಮನದಲ್ಲಿ ವಂದಿಸಿದರು.

ಹೀಗೆ ಅಂದು ಇಂದು ಎಂದೆಂದಿಗೂ ಜಗತ್ತನ್ನು ಕಾಪಾಡುವ ಜಗದ್ರಕ್ಷಕನಾಗಿ, ಕರುಣಾಮಯಿಯಾಗಿ ಪ್ರೇಮಮಯಿಯಾಗಿ ವಾತ್ಸಲ್ಯದ ಪ್ರತಿರೂಪವಾದ ಕೃಷ್ಣ ನಮ್ಮೆಲ್ಲಾ ಮನದ ಕ್ಲೇಶಗಳಿಗೆ ಉತ್ತರ ನೀಡುವ ಭಗವದ್ಗೀತೆಯನ್ನು ಜಗತ್ತಿಗೆ ನೀಡಿದ್ದು ಆತನನ್ನು ಜಗದ್ಗುರುವೆಂದು ಪೂಜಿಸುವ ಜನ "ಕೃಷ್ಣಂ ವಂದೇ ಜಗದ್ಗುರುಮ್" ಎಂದು ಪೂಜಿಸಿ ಭಜಿಸುತ್ತಾರೆ.



# "ಮೀರಾಳ ಸ್ವಗತ"

ನಾನು ಕೃಷ್ಣಾರಾಧಕಿ. ನನ್ನ ಚಿಕ್ಕಂದಿನಲ್ಲಿ ಮದುವೆ ದಿಬ್ಬಣ ನೋಡಿ, ಅಮ್ಮನಲ್ಲಿ 'ನನ್ನ ಪತಿ ಯಾರೆಂದು'ಕೇಳಿದ ಪ್ರಶ್ನೆಗೆ, ಅವರು ಅಲ್ಲೇ ಇದ್ದ ಕೃಷ್ಣನ ಮೂರ್ತಿ ತೋರಿಸಿ ಹೇಳಿದ, 'ಅವನೇ ನಿನ್ನ ಪತಿ',ಎಂದು ಹೇಳಿದ್ದೇ, ನಾನು ಅವನಲ್ಲಿ ಅನುರಕ್ತೆಯಾನ್ನಾಗಿಸಿ, ಮಾನಸಪತಿಯಾಗಿ ಸ್ವೀಕರಿಸಿದವಳು".

"ನನ್ನ ತಂದೆಯ ಆಸ್ಥಾನಕ್ಕೆ ಬಂದ ಸನ್ಯಾಸಿಯೊಬ್ಬರಲ್ಲಿದ್ದ ಕೃಷ್ಣನ ಮೂರ್ತಿಯನ್ನೇ ಪಡೆದು ಹಾಡಿದೆ, ನರ್ತಿಸಿದೆ. ಸ್ತುತಿಸುತ್ತಾ ನನ್ನ ನಾ ಮರೆತೆ. ಭವಬಂಧನಗಳನ್ನು ಕಳಚಿಕೊಂಡು, ಆಧ್ಯಾತ್ಮ ಸಾಕ್ಷಾತ್ಕಾರ ಹೊಂದಿ, ಸಂಸಾರದ ವಿಮುಖತೆಯತ್ತ ಹೊರಳಿದೆ".

"ಕೃಷ್ಣನನ್ನೇ ಮಾನಸ ಪತಿಯಾಗಿ ಸ್ವೀಕರಿಸಿದವಳಿಗೆ, ಮತ್ತೊಂದು ವಿವಾಹ ಬಂಧನ ಬೇಕೇ!?" ಇಷ್ಟವಿಲ್ಲದಿದ್ದರೂ ಕೇಳದೇ, ರಜಪೂತ ರಾಜಕುಮಾರಿಯಾದರೂ ನನ್ನ ಮಾತಿಗೆ ಸಮ್ಮತವಿಲ್ಲದೇ, ಮದುವೆ ಎನ್ನುವ ಬಂಧನದಲ್ಲಿ ಸಿಲುಕಿಸಿಯೇ ಬಿಟ್ಟರು. ಅಲ್ಲಿಯೂ ನನ್ನ ಮತ್ತು ಕೃಷ್ಣನ ಆಧ್ಯಾತ್ಮಿಕ ಬಂಧನ, ಯಾರಿಗೂ ಅರ್ಥವಾಗಿಲಿಲ್ಲ. ಕೊನೆಗೆ ಅಲ್ಲಿಯೂ ನೆಲೆ ಇರದೇ, ತವರಿನಲ್ಲೂ ನೆಲೆ ಇರದೇ, ಸಂಸಾರದ ಭವಬಂಧನ ಕಳಚಿಕೊಂಡೇ, ಆಧ್ಯಾತ್ಮದ ಬಂಧನದಿಂದ ವೃಂದಾವನದತ್ತ ಹೆಜ್ಜೆ ಹಾಕಿದೆ".

"ಕೃಷ್ಣನ ಬಗೆಗಿನ ಉತ್ಕಟ ಪ್ರೀತಿ,ಅವನೆಡೆಗಿನ ಸೆಳೆತ–ತುಡಿತ, ಕವಿತ್ವ ರೂಪ ಪಡೆದು, ಹಾಡಿನ ರೂಪದಲ್ಲಿ ಹೊರ ಹೊಮ್ಮತೊಡಗಿದವು. ಕೃಷ್ಣ ಭಜನೆಗಳಾದವು, ಇಂದಿನ ಮೀರಾ ಭಜನೆಗಳಾದವು".

"ಕೃಷ್ಣನ ಮಾನಸಾನುರಕ್ತೆಯ ಕಥಾನಕ, ಓದಿದ ನಿಮ್ಮ ಸಹೃದಯಕ್ಕೆ ಧನ್ಯವಾದಗಳು'.

ಇತಿ ನಿಮ್ಮ ಮೀರಾ.

**– ಲೀಲಾವತಿ ವಿಜಯಕುಮಾರ**
ಹ.ಬೊ.ಹಳ್ಳಿ

## ಕವಿ ಮನಸು

### ನೆನೆಯುವೆ ನಾದಲೋಲ



ಕನಸೊಂದ ಕಾಣುವೆ ಕೃಷ್ಣ
ಕರದಲ್ಲಿ ನೀ ಮುಚ್ಚು ಎನ್ನ ಕಣ್ಣ
ತುಂಬುತ್ತಾ ಬಾರಯ್ಯ
ಬದುಕಲ್ಲಿ ವಿಧ ವಿಧ ಬಣ್ಣ

ಎನ್ನಂತರಂಗ ಬಲ್ಲವ ನೀನಯ್ಯ
ಅಂತರ ತೋರದಿರು ಎನ್ನಯ್ಯ
ಚೆಂದದ ಗುಲಾಬಿ ನಾನಿರುವೆ
ಬೆಂಬಿಡದೆ ಎನ್ನ ಬೆಂಗಾಲಾಗಿರುವೆ

ಅತ್ತಿತ್ತ ಅಗಲಿ ನೀ ಹೋಗಬೇಡ
ಎತ್ತ ನೋಡಿದರೂ ನಿನ್ನ ಬೀಡ
ಮುರಳಿ ಗಾನ ನುಡಿಸದಿರಬೇಡ
ಮೈ ಮರೆತು ಎನ್ನ ಕೈ ಬಿಡಬೇಡ

ತುಂಟನಿವ ನವನೀತ ಚೋರ
ಕಂಟಕ ನಿವಾರಕ ಪೋರ
ತಂತ್ರದೊಳು ಜಗ ಗೆದ್ದವನೇ
ಭಜಿಸುವೆ ಶ್ರೀ ಕೃಷ್ಣ ನಾಮವನ್ನೇ

ಇಂದು ನಿನ್ನಯ ಜನ್ಮದಿನ ಕೃಷ್ಣಾಷ್ಟಮಿ
ನೆನೆಯುವೆ ನಾದಲೋಲ ನಮೋನಮಾಮಿ
ಶುಭ ಶ್ರಾವಣದ ಅಷ್ಟಮಿ ದಿನವಿಂದು
ಕಡು ಕಷ್ಟಗಳ ಪರಿಹರಿಸೋ ನೀ ಬಂದು

– ಕೆ ಎಂ ಬಸವರಾಜ, ಹೊಸಪೇಟೆ

# ಶ್ರೀ ಕೃಷ್ಣನ ಸಂದೇಶಗಳು ಎಲ್ಲರ ಬದುಕಿಗೆ ಅನ್ವಯ

## ಶಿಕ್ಷಕ ಮಹೇಶ್ ಬಳ್ಳಾರಿ ಹೇಳಿಕೆ | ಶ್ರೀ ಕೃಷ್ಣ ಜಯಂತಿ | ರಾಧಾ–ಕೃಷ್ಣ ವೇಷದಲ್ಲಿ ಗಮನ ಸೆಳೆದ ಮಕ್ಕಳು

■ **ಹಂಪಿ ಟೈಮ್ಸ್ ಕೊಪ್ಪಳ**

ಶ್ರೀಕೃಷ್ಣನ ಸಂದೇಶಗಳು ಸದಾಕಾಲ ಮನುಷ್ಯಪರ ಮತ್ತು ಜೀವಪರವಾಗಿವೆ ಎಂದು ಕೊಪ್ಪಳದ ಶಿಕ್ಷಕರಾದ ಮಹೇಶ್ ಬಳ್ಳಾರಿ ಅವರು ಹೇಳಿದರು.

ಕೊಪ್ಪಳ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದ ಸಿರಸಪ್ಪಯ್ಯನ ಮಠದ ಓಣಿಯಲ್ಲಿರುವ ಶ್ರೀ ಕೃಷ್ಣ ದೇವಸ್ಥಾನದ ಯಾದವ ಸಾಂಸ್ಕೃತಿಕ ಕಲಾ ಸಂಘದ ಆವರಣದಲ್ಲಿ ಆಗಸ್ಟ್ 26ರಂದು ಹಮ್ಮಿಕೊಂಡಿದ್ದ ಶ್ರೀ ಕೃಷ್ಣ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ, ಅವರು ಮಾತನಾಡಿದರು.

ಶ್ರೀಕೃಷ್ಣ ಏಕಮುಖದ ವ್ಯಕ್ತಿಯಲ್ಲ. ಹಲವು ಕರ್ತೃತ್ವ ಶಕ್ತಿಗಳ ಮಹಾ ಸಾಧಕರು. ಅವರು ಓರ್ವ ದಾರ್ಶನಿಕ, ಸಾಮಾಜ ಸುಧಾರಕ, ಚಿಂತಕ, ನಿರ್ವಾಹಕ, ಜ್ಞಾನಿ, ಸುಜ್ಞಾನಿ, ವಿಜ್ಞಾನಿ, ತಂತ್ರಜ್ಞಾನಿಯ ಜೊತೆಗೆ ಬಹುದೊಡ್ಡ ರಾಜತಾಂತ್ರಿಕರಾಗಿದ್ದರು. ಅಲ್ಲದೇ ಶ್ರೀಕೃಷ್ಣರು ಸಂಗೀತದ ಬಹುದೊಡ್ಡ ಪ್ರೇಮಿಯಾಗಿದ್ದರು. ಜೀವನದ ಮೌಲ್ಯಗಳು, ಸಾಮಾಜ ಸುಧಾರಣೆ, ವಿಜ್ಞಾನದ ಸಂಗತಿಗಳು, ಆಧ್ಯಾತ್ಮ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಶ್ರೀಕೃಷ್ಣ ನೀಡಿರುವ ಸಂದೇಶಗಳು ಸರ್ವಕಾಲಕ್ಕು ಅತ್ಯವಶ್ಯಕವಾಗಿವೆ. ಜೀವನದಲ್ಲಿ ಕಷ್ಟ ಮತ್ತು ಸುಖಃಗಳನ್ನು ಸಮನಾಗಿ ಸ್ವೀಕರಿಸಬೇಕು. ಪ್ರತಿಯೊಬ್ಬರಲ್ಲಿಯೂ ಆತ್ಮಗೌರವನ್ನು ಹೊಂದಬೇಕು. ಪ್ರತಿ ಜೀವಿಯಲ್ಲಿಯೂ ದೇವರು ನೆಲೆಸಿರುತ್ತಾನೆ ಮತ್ತು ಪ್ರತಿಯೊಬ್ಬರನ್ನು ನಾವು ಗೌರವದಿಂದ ಕಾಣಬೇಕು. ಸೇವಾಮನೋಭಾವನೆಯನ್ನು ರೂಡಿಸಿಕೊಳ್ಳಬೇಕೆಂಬುವುದೇ ಶ್ರೀಕೃಷ್ಣರ ಪ್ರಮುಖ ಸಂದೇಶಗಳಾಗಿವೆ ಎಂದರು.

ಮೊದಲ ಗೋಪಾಲಕರಾಗಿದ್ದ ಶ್ರೀಕೃಷ್ಣನ ತಂದೆ ವಸುದೇವ ತಾಯಿ ದೇವಕಿ, ಗೋಕುಲದಲ್ಲಿ ಬೆಳೆದ ಶ್ರೀ ಕೃಷ್ಣ ಇಡೀ ಜಗತ್ತಿಗೆ ಆದರ್ಶಪ್ರಾಯವಾಗಿದ್ದಾರೆ. ಅವರ ಸಂದೇಶ ಎಲ್ಲರ ಬದುಕಿಗೂ ಅನ್ವಯಿಸುವ ಚಿಂತನೆಗಳಾಗಿವೆ. ಪ್ರತಿಯೊಬ್ಬರ ಜೀವನ ಆದರ್ಶಮಯವಾಗಿರಬೇಕು, ಜೀವನದಲ್ಲಿ ವ್ಯಕ್ತಿ ಹೇಗೆ ಬದುಕು ರೂಪಿಸಿಕೊಳ್ಳಬೇಕು ಎಂದು ಶ್ರೀ ಕೃಷ್ಣ ಉಪದೇಶಿಸಿದ್ದಾರೆ ಎಂದರು.



ಕೊಪ್ಪಳ ಸಂಸದ ರಾಜಶೇಖರ ಹಿಟ್ನಾಳ ಶ್ರೀಕೃಷ್ಣ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಗೌರವ ನಮನ ಸಲ್ಲಿಸಿದರು.

ರಾಧಾ–ಕೃಷ್ಣ ವೇಷದಲ್ಲಿ ಗಮನ ಸೆಳೆದ ಮಕ್ಕಳು: ಶ್ರೀ ಕೃಷ್ಣ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ರಾಧಾ–ಕೃಷ್ಣ ವೇಷದಲ್ಲಿ ಪಾಲ್ಗೊಂಡಿದ್ದ ಮಕ್ಕಳು ಎಲ್ಲರ ಗಮನ ಸೆಳೆದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಎಲ್ಲಾ ಗಣ್ಯರು ನೆರವೇರಿಸಿದರು. ಸಮಾಜದ ಮುಖಂಡರಾದ ರಮೇಶ್ ನಾಗೇಶನಹಳ್ಳಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಳ್ಳಿ, ಸಮಾಜದ ಮುಖಂಡರಾದ ಜಗನ್ನಾಥ ಹುಲಿಗಿ, ಪ್ರಾಣೇಶ್ ಪೂಜಾರ, ಹುಲಗಪ್ಪ ವಾಲಿಕಾರ, ಸಂಗಪ್ಪ ಬಾಗಲಿ, ಭೀಮಣ್ಣ ಲೇಬಗೇರಿ, ವೆಂಕಟೇಶ್ ಕಟ್ಟಿಮನಿ, ರಮೇಶ್ ನಾಗೇಶನಹಳ್ಳಿ, ಕಾಮಾಕ್ಷಿ ವಾಲಿಕಾರ, ಹುಲಿಗಮ್ಮ ವಾಲಿಕಾರ ಸೇರಿದಂತೆ ಮತ್ತಿತರರಿದ್ದರು.

ಸಾಹಿತಿಗಳಾದ ಸಾವಿತ್ರಿ ಮುಜುಮದಾರ ಅವರು ಕಾರ್ಯಕ್ರಮ ನಿರೂಪಿಸಿದರು. ಸಮಗೀತ ಶಿಕ್ಷಕರಾದ ಸದಾಶಿವ ಪಾಟೀಲ್ ಹಾಗೂ ತಂಡದವರು ನಾಡಗೀತೆಯನ್ನು ಪ್ರಸ್ತುತ ಪಡಿಸಿದರು.

ವೇದಿಕೆ ಕಾರ್ಯಕ್ರಮದ ಬಳಿಕ ಶ್ರೀಕೃಷ್ಣ ಭಾವಚಿತ್ರದ ಮೆರವಣಿಗೆಯು ನಗರದ ಸಿರಸಪ್ಪಯ್ಯನ ಮಠದ ಓಣಿಯಿಂದ ಗಡಿಯಾರ ಕಂಬದವರೆಗೆ ಅದ್ದೂರಿಯಾಗಿ ಜರುಗಿತು. ಮೆರವಣಿಗೆಯಲ್ಲಿ ಯುವಕರು, ಮಹಿಳೆಯರು, ಮಕ್ಕಳು ಉತ್ಸಾಹದಿಂದ ಪಾಲ್ಗೊಂಡಿದ್ದರು.

## ಪೌರಾಯುಕ್ತರ ಅಮಾನತ್ತಿಗೆ ಆಗ್ರಹಿಸಿ ಸದಸ್ಯರ ಪ್ರತಿಭಟನೆ

**ಮೊದಲ ಪುಟದಿಂದ**

ಆಕ್ರೋಶವ್ಯಕ್ತಪಡಿಸಿ, ಅವರ ಪ್ರತಿಕೃತಿ ದಹಿಸಲು ಮುಂದಾಗಿದ್ದರು. ಪೊಲೀಸರು ಮಧ್ಯಪ್ರವೇಶಿಸಿ ಪ್ರತಿಕೃತಿ ದಹಿಸದಂತೆ ತಡೆದರು ಮನವೊಲಿಸಿದರು. ನಗರಸಭೆಗೆ ಜಿಲ್ಲಾಧಿಕಾರಿಗಲೇ ಪ್ರಭಾರಿ ಅಧ್ಯಕ್ಷರಾಗಿರುವುದರಿಂದ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಮೃತ ಬಾಲಕನ ಕುಟುಂಬಕ್ಕೆ ಪರಿಹಾರ ನೀಡಬೇಕು. ಪೌರಾಯುಕ್ತರನ್ನು ಕೂಡಲೇ ಅಮಾನತ್ತು ಗೊಳಿಸಬೇಕು. ಜಿಲ್ಲಾದಿಕಾರಿ ಬರುವವರೆಗೂ ಪ್ರತಿಭಟನೆಯಿಂದ ಮೇಲೇಳುವುದಿಲ್ಲ ಎಂದರು.

ನಗರಸಭೆ ಪೌರಾಯುಕ್ತರು ನಗರದ ಸಮಸ್ಯೆಗಳ ಪರಿಹಾರಕ್ಕೆ ಒತ್ತು ನೀಡುತ್ತಿಲ್ಲ. ಸದಸ್ಯರು ಮತ್ತು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಜನರು ತಾವು ಆಯ್ಕೆ ಮಾಡಿದ ವಾರ್ಡಿನ ಜನಪ್ರತಿನಿಧಿಗಳನ್ನು ಪ್ರಶ್ನಿಸುತ್ತಿದ್ದಾರೆ. ನಗರಸಭೆಯವರಿಗೆ ಅಭಿವೃದ್ಧಿ ಮಾಡಲಾಗದಿದ್ದರೆ, ನಗರಸಭೆ ಜನರಿಂದ ತೆರಿಗೆ ಸಂಗ್ರಹಿಸುವುದನ್ನೆ ಕೈಬಿಟ್ಟುಬಿಡಲಿ. ತೆರಿಗೆಯೂ ಕಟ್ಟಬೇಕು. ಸಂಕಷ್ಟ ಅನುಭವಿಸಬೇಕು ಎಂಬುದು ಯಾವ ನ್ಯಾಯ ಎಂದು ಜನ ಪ್ರಶ್ನೆ ಮಾಡುತ್ತಿದ್ದಾರೆ. ಪೌರಾಯುಕ್ತರು, ಜಿಲ್ಲಾಡಳಿತ ಜನರಿಗೆ ಉತ್ತರ ಹೇಳಬೇಕು. ಜನರ ತೆರಿಗೆಯಿಂದಲೇ ವೇತನ ದೊರೆಯುತ್ತದೆ ಎಂಬುದನ್ನು ಅಧಿಕಾರಿಗಳು ಮರೆಯಬಾರದು. ನಗರಸಭೆ ಮುಂದೆಯೇ ಹತ್ತಾರು ಗುಂಡಿಗಳು ಬಿದ್ದಿದ್ದರೂ ಅಧಿಕಾರುಗಳು ಕಣ್ಣೆತ್ತಿ ನೋಡುತ್ತಿಲ್ಲ. ಐಷರಾಮಿ ವಾಹನಗಳಲ್ಲಿ ಓಡಾಡುವ ಅಧಿಕಾರಿಗಳಿಗೆ ಸಾಮಾನ್ಯ ಜನರ ಕಷ್ಟ ತಿಳಿಯವುದಿಲ್ಲ. ನಗರದಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದೆ. ರಾತ್ರಿ ಬೀಟ್ ಮಾಡುವ ಪೊಲೀಸರಿಗೂ ಭೀತಿ ಎದುರಾಗಿದೆ. ನಾಯಿಗಳಿಗೇನು ಪೊಲೀಸರು, ಸಾಮಾನ್ಯರು ಎಂಬುದು ಗೊತ್ತಾಗುತ್ತದೆಯೇ? ನಾಯಿ ಹಾವಳಿಗೆ ಇತ್ತೀಚೆಗೆ ಚಿತ್ತವಾಡಿಗಿ ಪ್ರದೇಶ ಮಗುವೊಂದು ತುತ್ತಾಗಿದೆ. ರಾತ್ರಿ ವೇಳೆ ಓಡಾಡದಂತಾಗಿದೆ. ನ್ಯಾಯ ಸಿಗುವವರೆಗೂ ಎದ್ದೇಳುವುದಿಲ್ಲವೆಂದು ನಗರಸಭೆಯ ಸದಸ್ಯರು ಪೊಲೀಸರ ಮಾತಿಗೂ ಜಗ್ಗದೆ ಪ್ರತಿಭಟನೆ ನಡೆಸಿದರು. ಪೊಲೀಸರು ಮಧ್ಯಪ್ರವೇಶಿಸಿ, ಪೂರ್ವನಿಯೋಜಿತ ಮೀಟಿಂಗ್ ನಿಮಿತ್ತ ಈ ಕ್ಷಣಕ್ಕೆ ಜಿಲ್ಲಾಧಿಕಾರಿಗಳು ಆಗಮಿಸುವುದಿಲ್ಲ ಎಂದು ತಿಳಿಸಿದ ಬಳಿಕ ಅಕ್ರೋಶಗೊಂಡ ಸದಸ್ಯರು ಜಿಲ್ಲಾಧಿಕಾರಿಗಳು ಬರುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ ಎಂದರು.

ಬೆಳಿಗ್ಗೆಯಿಂದ ಸಂಜೆ ಸುರಿಯುವ ಮಳೆಯಲ್ಲಿ ಕುಳಿತು ಪ್ರತಿಭಟನೆ ಮುಂದುವರೆಸಿದರು. ರಾತ್ರಿ 8 ಗಂಟೆವರೆಗೆ ಕೂತಿದ್ದರಿಂದ ನಂತರ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರ ಮನವಿ ಸ್ವೀಕರಿಸಿ ಮಾತನಾಡಿದರು. ಮೃತ ಬಾಲಕನ ಕುಟುಂಬಕ್ಕೆ ಪರಿಹಾರ ನೀಡುವ ನಿಟ್ಟಿನಲ್ಲಿ ಸೂಕ್ತ ಕ್ರಮವಹಿಸಲಾಗುವುದು. ಪೌರಾಯುಕ್ತರನ್ನು ಕೂಡಲೇ ಅಮಾನತ್ತು ಮಾಡಬೇಕೆಂಬ ನಿಮ್ಮ ಒತ್ತಾಯಕ್ಕೆ ಈಗ ಅಮಾನತ್ತು ಮಾಡಲು ಅಸಾಧ್ಯ. ಪ್ರಕರಣ ಕುರಿತು ತನಿಖೆ ಮಾಡಲು ವಹಿಸಲಾಗಿದೆ. ತನಿಖಾ ವರದಿ ಆಧರಿಸಿ ಕ್ರಮಕೈಗೊಳ್ಳಲಾಗುವುದು ಎಂದರು. ಪಕ್ಷಾತೀತವಾಗಿ ಬಿಜೆಪಿ, ಕಾಂಗ್ರೆಸ್, ಪಕ್ಷೇತರ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಹಂಪಿ ಟೈಮ್ಸ್ ಚಾನಲ್
ವಿಜಯನಗರದ ಹೆಮ್ಮೆ
FREE!
hampitimes epaper
SCAN QR CODE TO JOIN FOLLOW
HAMPI TIMES
whatsapp channel

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**27–08–2024 – ಮಂಗಳವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ರೋಹಿಣಿ |
| ಯೋಗ | : ಹರ್ಷಣ |
| ಕರಣ | : ತೈತುಲ |
| ಸೂರ್ಯೋದಯ | : 06:08:41 |
| ಸೂರ್ಯಾಸ್ತ | : 18:47:38 |
| ರಾಹು ಕಾಲ | : 15:38–17:13 |
| ಯಮಘಂಡ ಕಾಲ | : 09:18–10:53 |
| ಗುಳಿಕ ಕಾಲ | : 12:28–12:53 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 26–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1628.04 ಅಡಿ |
| ಒಳ ಹರಿವು | 17311 ಕ್ಯುಸೆಕ್ |
| ಹೊರ ಹರಿವು | 10075 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 86.876 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1626.15 ಅಡಿ |
| ಒಳ ಹರಿವು | 1206 ಕ್ಯುಸೆಕ್ |
| ಹೊರ ಹರಿವು | 9784 ಕ್ಯುಸೆಕ್ |
| ಸಾಮರ್ಥ್ಯ | 85.993 ಟಿಎಂಸಿ |

# ಕ್ಷಯರೋಗಕ್ಕೆ ಭಯ ಬೇಡ ಉಚಿತ ಚಿಕಿತ್ಸೆ ಲಭ್ಯ

## ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಸಾವಿರಾರು ವರ್ಷಗಳಿಂದ ಸಮುದಾಯದಲ್ಲಿ ಬೇರುರಿರುವ ಕ್ಷಯರೋಗ (ಟಿಬಿ) ಕೊನೆಗಾಣಿಸಲು ಉಚಿತ ಚಿಕಿತ್ಸೆ ಲಭ್ಯವಿದ್ದು, ಜೊತೆಗೆ ರೋಗವನ್ನು ಸಕಾಲದಲ್ಲಿ ಗುಣಪಡಿಸಲು ದಾನಿಗಳಿಂದ ಪೌಷ್ಟಿಕ ಆಹಾರ ಒದಗಿಸಲಾಗುತ್ತಿದ್ದು, ಇದರ ಸದುಪಯೋಗ ಪಡೆಯಿರಿ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಘಟಕ ಆಶ್ರಯದಲ್ಲಿ ಸೋಮವಾರ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಜೆಎಸ್‌ಡಬ್ಲ್ಯು ಫೌಂಡೇಷನ್ ಸಂಸ್ಥೆಯು ಜಿಲ್ಲೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 1287 ರೋಗಿಗಳನ್ನು ಪ್ರಧಾನಮಂತ್ರಿ ಕ್ಷಯಮುಕ್ತ ಅಭಿಯಾದನದಡಿ ದತ್ತು ತೆಗೆದುಕೊಂಡು ಅವರಿಗೆ ಮುಂದಿನ ಆರು ತಿಂಗಳು ವಿವಿಧ ದವಸ–ಧಾನ್ಯ ಒಳಗೊಂಡ ಕಿಟ್ ಒದಗಿಸುವ ಒಪ್ಪಂದದಂತೆ ಒದಗಿಸಿದ ಕಿಟ್‌ಗಳನ್ನು ಸಾಂಕೇತಿಕವಾಗಿ ವಿತರಿಸಿ ಅವರು ಮಾತನಾಡಿದರು.

ಮೈಕೋ ಬ್ಯಾಕ್ಟೀರಿಯಂ ಟ್ಯೂಬರ್‌ಕ್ಯುಲೋಸಿಸ್ ಎಂಬ ರೋಗಾಣುನಿಂದ ಹರಡುವ ಈ ಕಾಯಿಲೆ ಎರಡು ವಾರಗಳಿಗಿಂತ ಹೆಚ್ಚು ದಿನದ ಕೆಮ್ಮು, ಉಸಿರಾಟದಲ್ಲಿ ತೊಂದರೆ, ಸಂಜೆ ವೇಳೆ ಜ್ವರ, ರಾತ್ರಿ ವೇಳೆ ಮೈ ಬೆವರುವುದು, ಕಫದಲ್ಲಿ ರಕ್ತ ಬೀಳುವುದು, ಎದೆ ನೋವು, ಹಸಿವಾಗದಿರುವುದು, ತೂಕ ಇಳಿಕೆ, ರೋಗದ ಪ್ರಮುಖ ಲಕ್ಷಣಗಳಾಗಿದ್ದು, ಕ್ಷಯರೋಗವನ್ನು ನಿರ್ಮೂಲನೆ ಮಾಡಲು ಪಣತೊಡಬೇಕಿದೆ ಎಂದು ಹೇಳಿದರು.

ಕ್ಷಯವೆಂದು ಖಚಿತಪಟ್ಟಲ್ಲಿ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರದಲ್ಲಿ ವೈದ್ಯರ ನಿರ್ದೇಶನದಂತೆ, 6 ತಿಂಗಳು ಉಚಿತ ಚಿಕಿತ್ಸೆ ಪಡೆದು ಗುಣಮುಖರಾಗಿ ಕ್ಷಯಮುಕ್ತ ಬಳ್ಳಾರಿಗಾಗಿ ಕೈಜೋಡಿಸಬೇಕು ಎಂದು ತಿಳಿಸಿದರು.

ಜೆಎಸ್‌ಡಬ್ಲ್ಯು ಫೌಂಡೇಷನ್ ವಿಜಯನಗರ, ಸೇಲಂನ ಅಧ್ಯಕ್ಷ ಪಿ.ಕೆ.ಮುರುಗನ್ ಮಾತನಾಡಿ, ಪ್ರಸ್ತುತ ಬಳ್ಳಾರಿ ಜಿಲ್ಲೆಯಲ್ಲಿ ಕ್ಷಯರೋಗ ಚಿಕಿತ್ಸೆ ಪಡೆಯುತ್ತಿರುವ ಪ್ರತಿಯೊಬ್ಬರ ಆರೋಗ್ಯ ಸುಧಾರಣೆಗೆ ಕಟಿಬದ್ಧರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ 45 ಲಕ್ಷ ರೂ. ವೆಚ್ಚದಲ್ಲಿ ಕೀಟ್‌ಗಳನ್ನು ವಿತರಿಸಲಾಗಿದೆ. ಜೊತೆಗೆ ಆರೋಗ್ಯದ ಕ್ಷೇತ್ರದ ಇತರ ಯಾವುದೇ ಕಾರ್ಯಕ್ಕೆ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶಬಾಬು, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ.ವಿ., ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ.ವಿ.ಕೆ., ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮಾಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜೆಎಸ್‌ಡಬ್ಲ್ಯು ಅಧಿಕಾರಿಗಳಾದ ರಾಜೇಂದ್ರ, ಮುತ್ತುಕೃಷ್ಣ, ಪೆದ್ದಣ, ಪಂಪಾಪತಿ, ಅರ್ಚನಾ ಹಾಗೂ ಸಿಬ್ಬಂದಿಯವರು ಸೇರಿದಂತೆ ಇತರರು ಇದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು
ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

### ವಿಷಯ : ಕನ್ನಡ(ಪ್ರ.ಭಾ): ಪದ್ಯ– ಕೌರವೇಂದ್ರನ ಕೊಂದೆ ನೀನು

**ಕವಿ ಪರಿಚಯ– (ಮಾರ್ಚ್ –2019, ಮಾರ್ಚ್ 2022 ,ಜೂನ್ –2024) ಕುಮಾರವ್ಯಾಸ** – ಈತನ ಕಾಲ ಕ್ರಿ..ಶ. 1430 , ಕುಮಾರವ್ಯಾಸನ ನಿಜನಾಮ ಗದುಗಿನ ನಾರಾಣಪ್ಪ. ಈತನ ಜನ್ಮಸ್ಥಳ ಗದಗ ಪ್ರಾಂತ್ಯದ ಕೋಳಿವಾಡ. ಕುಮಾರವ್ಯಾಸನ ಪ್ರಸಿದ್ಧ ಕೃತಿ" ಕರ್ಣಾಟ ಭಾರತ ಕಥಾಮಂಜರಿ" ಎಂಬ ಕಾವ್ಯವನ್ನು ಬರೆದಿದ್ದಾನೆ. ಈ ಮಹಾಕಾವ್ಯಕ್ಕೆ ಕನ್ನಡ ಭಾರತ, ಗದುಗಿನ ಭಾರತ ಕುಮಾರವ್ಯಾಸ ಭಾರತ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ಅಲ್ಲದೆ ಈತನು ಐರಾವತ ಎಂಬ ಕೃತಿಯನ್ನು ರಚಿಸಿದ್ದಾನೆ ಎಂಬುದು ತಿಳಿದು ಬಂದಿದೆ. ರೂಪಕಾಲಂಕಾರವನ್ನು ತನ್ನ ಕಾವ್ಯದಲ್ಲಿ ನಿರ್ಗಳವಾಗಿ ಪ್ರಯೋಗಿಸಿದ್ದರಿಂದ ಈತನಿಗೆ" ರೂಪಕ ಸಾಮ್ರಾಜ್ಯ ಚಕ್ರವರ್ತಿ" ಎಂದು ಕರೆಯಲಾಗಿದೆ. ನಡುಗನ್ನಡ ಕಾವ್ಯ ಪರಂಪರೆಯಲ್ಲಿ ಗದುಗಿನ ಭಾರತ ಅತ್ಯಂತ ಜನಪ್ರಿಯವಾದ ಮಹಾಕಾವ್ಯ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಶ್ರೀ ಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಹೇಗೆ ಕೂರಿಸಿಕೊಂಡನು? (ಸೆಪ್ಟಂಬರ್–2020)**
**ಉತ್ತರ–** ಶ್ರೀ ಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಮೃದುನತನದ ಸರಸವನ್ನು ಮಾಡಿ, ಕೈ ಹಿಡಿದು ಎಳೆದು ಕೂರಿಸಿಕೊಂಡನು

**2. ಕುಮಾರವ್ಯಾಸನ ಆರಾಧ್ಯ ದೈವ ಯಾರು ?**
ಉತ್ತರ– ಕುಮಾರವ್ಯಾಸನ ಆರಾಧ್ಯ ದೈವ ಗದುಗಿನ ವೀರನಾರಾಯಣ.

**3. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು ?**
**ಉತ್ತರ–** ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ.

**4. ಕುಮಾರವ್ಯಾಸನಿಗೆ ಇರುವ ಬಿರುದು ಯಾವುದು ?**
**ಉತ್ತರ–** ಕುಮಾರವ್ಯಾಸನಿಗಿರುವ ಬಿರುದು" ರೂಪಕ ಸಾಮ್ರಾಜ್ಯ ಚಕ್ರವರ್ತಿ"

**5. ನಾರಾಣಪ್ಪನಿಗೆ ಕುಮಾರವ್ಯಾಸನೆಂಬ ಹೆಸರು ಏಕೆ ಬಂತು ?**
**ಉತ್ತರ–** ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ರಚಿಸಿದ್ದರಿಂದ ನಾರಾಣಪ್ಪನಿಗೆ ಕುಮಾರವ್ಯಾಸನೆಂಬ ಹೆಸರು ಬಂತು.

**6. ಕರ್ಣನ ಕಿವಿಯಲ್ಲಿ ಉಭಯವನ್ನು ಬಿತ್ತಿದವರು ಯಾರು ?(ಜೂನ್ –2018)**
**ಉತ್ತರ–** ಕರ್ಣನ ಕಿವಿಯಲ್ಲಿ ಉಭಯವನ್ನು ಬಿತ್ತಿದವರು ಶ್ರೀ ಕೃಷ್ಣ.

**7. ಸೂರ್ಯನ ಅನುಗ್ರಹದಿಂದ ಜನಿಸಿದವನು ಯಾರು ?(ಜುಲೈ –2021)**
**ಉತ್ತರ–** ಸೂರ್ಯನ ಅನುಗ್ರಹದಿಂದ ಜನಿಸಿದವನು ಕರ್ಣ.

**8. ಮಾದ್ರಿಯಲೊಂದು ಮಂತ್ರದೊಳುದಿಸಿದ ಇಬ್ಬರು ಯಾರು? (ಜುಲೈ –2021)**
**ಉತ್ತರ–** ಮಾದ್ರಿಯಲೊಂದು ಮಂತ್ರದೊಳುದಿಸಿದ ಇಬ್ಬರು ಯಾರೆಂದರೆ ನಕುಲ ಸಹದೇವ.

**9. ಅಂತಕಾತ್ಮಜ ಎಂದರೆ ಯಾರು ? (ಸೆಪ್ಟಂಬರ್ 2021)**
**ಉತ್ತರ–** ಅಂತಕಾತ್ಮಜ ಎಂದರೆ ಯುಧಿಷ್ಠಿರ.

ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

**1. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು ?**
ಅಥವಾ
**ಮೇದಿನಿ ಪತಿ ನೀನು ಎಂದು ಕೃಷ್ಣ ನು ಕರ್ಣನ ಮನದಲ್ಲಿ ಹೇಗೆ ಭಯವನ್ನು ಬಿತ್ತಿದನು? ( ಮಾರ್ಚ್–2020)**
**ಉತ್ತರ–** ಕನ್ನಡ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ  ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ ಎಂದು ಹೇಳುತ್ತಾ ಶ್ರೀ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು ಬಿತ್ತಿದನು.

**2. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು ? ( ಮಾರ್ಚ್ –2022 , ಜೂನ್ –2024)**
**ಉತ್ತರ–** ಕರ್ಣನು ಕೃಷ್ಣನಿಗೆ" ಮರುಳು ಮಾಧವ , ನಾನು ರಾಜ್ಯದ ಸಿರಿ ಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ, ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆತುರದಲ್ಲಿದ್ದೆ. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ" ಎಂದನು.

**3. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು ?**
**ಉತ್ತರ–** ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣ ನ ಮನದಲ್ಲಿ" ಅಯ್ಯೋ ! ಕುರುಪತಿಗೆ ಕೇಡಾಯಿತು ಎಂದು ಮನದೊಳಗೆ ಹೇಳಿಕೊಂಡನು" ಕೃಷ್ಣನ ದ್ವೇಷದ ಬೆಂಕಿ ಬಗ್ಗೆ ಹೊಗೆಯಾಡಿದ ಮೇಲೆ ಅದು ಪೂರ್ತಿಯಾಗಿ ಸುಡದೆ ಹಾಗೇ ಬಿಡುವುದೇ ? ನನ್ನ ವಂಶದ ನಿಜ ಸ್ಥಿತಿಯನ್ನು ಹೇಳಿ ಕೃಷ್ಣ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದುಕೊಂಡನು.

**ಇ) ಕೆಳಗಿನ ಪದ್ಯ ಭಾಗವನ್ನು ಕಂಠಪಾಠ ಮಾಡಿ ಬರೆಯಿರಿ. (ಮಾರ್ಚ್–2017, ಜೂನ್–2018)**

ಕೊರಳ ಸೆರೆ ಹಿಗ್ಗಿದವು ದ್ರುಗು ಜಲ
ಉರವಣಿಸಿ ಕಡು ನೊಂದನ ಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆ ದೋರ ದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ.

ಅಥವಾ

ಮಾರಿ ಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲ್ಲಿ ಸುಭಟಕೋಟಿಯನು
ತೀರಿಸಿಯೆ ಪತಿ ಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು.ಕೆ. ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ(ತಾ) ವಿಜಯನಗರ(ಜಿ)


ಸಾಯಿಮಣಿ ಪ್ರಕಾಶನ, ಹೊಸಪೇಟೆ

# "ಕೃಷ್ಣಂ ವಂದೇ ಜಗದ್ಗುರುಮ್"


## ಮನೆ ಮನೆಗಳಲ್ಲಿ ಮಗುವಾದ ಜಗದ್ರಕ್ಷಕ, ಕರುಣಾಮಯಿ ಪ್ರೇಮಮಯಿ ಶ್ರೀಕೃಷ್ಣ




ಅಚ್ಯುತ್ ದಂಡಿನ್
ತಂದೆ : ಆನಂದ ದಂಡಿನ್
ತಾಯಿ : ಅಶ್ವಿನಿ ದಂಡಿನ್
ಗಂಗಾವತಿ



ಜಯಕೃಷ್ಣ ದೇವರಮನೆ
ತಂದೆ : ತಿರುಮಲೇಶ್ ದೇವರಮನೆ
ತಾಯಿ : ಅನುರಾಧ ದೇವರಮನೆ
ನಾಗೇನಹಳ್ಳಿ, ಹೊಸಪೇಟೆ. ವಿಜಯನಗರ



ಸದ್ಧರ್ಮ
ಹೂವಿನ ಹಡಗಲಿ
ವಿಜಯನಗರ



ಸಾನ್ವಿ
ತಲವಾಗಲು, ಹರಪನಹಳ್ಳಿ
ವಿಜಯನಗರ



ಅನ್ವಿತಾ, ಆರವ್
ಬಸವನದುರ್ಗ
ಹೊಸಪೇಟೆ ತಾ, ವಿಜಯನಗರ



ಕೌಟಿ ಆರ್ಯ
ಕೊಟ್ಟೂರು,
ವಿಜಯನಗರ

## "ಜಗತ್ತಿನ ಮೊದಲ ಪ್ರೇಮಿ ಶ್ರೀಕೃಷ್ಣ, ಆರಾಧನೆಗೆ ಇನ್ನೊಂದು ಹೆಸರೆ ರಾಧಾ"

■ ನಂದಿನಿ ಸುರೇಂದ್ರ ಸನಬಾಳ್ ಕಲಬುರಗಿ.

ಪ್ರೇಮಿಗಳು ಎಂದಾಗ ಹೊಳೆಯುವ ಅಪ್ಪಟ ಜೋಡಿ ಅಂದರೆ "ರಾಧಾಕೃಷ್ಣ" ರುಕ್ಮಿಣಿ ಕೃಷ್ಣ ಪರಮಾತ್ಮನ ಹೆಂಡತಿಯಾದರೂ ಕೂಡ, ರಾಧೆ ಕೃಷ್ಣನನ್ನೆ ಆರಾಸುತ್ತೇವೆ. ಯುಗ ಯುಗಗಳಿಂದಲೂ ಕೇಳಿಬರುವ ಪ್ರೇಮಿಗಳ ಪಟ್ಟಿಯಲ್ಲಿ ಮೊದಲನೆಯ ಸ್ಥಾನ ರಾಧೆಕೃಷ್ಣನದು. ಕೃಷ್ಣ




ಜಗದೊಧಾರಕ, ಜಗದ್ರಕ್ಷಕ,ರಾಧೆ ಯುಗ ಯುಗಗಳ ವರೆಗೂ ಕೃಷ್ಣನ ಬರುವಿಕೆಗಾಗಿ ಕಾಯುತ್ತಾಳೆ, ಆರಾಧಿಸುತ್ತಾಳೆ, ಪೂಜಿಸುತ್ತಾಳೆ, ಕೃಷ್ಣನನ್ನು ಪ್ರೇಮಿಸುತ್ತಾಳೆ.ಕೃಷ್ಣನಿಗೂ ಕೂಡ ರಾಧೆಯ ಮೇಲೆ ಅಷ್ಟೆ ಪ್ರೀತಿ. ಎಷ್ಟು ದೂರ ಇದ್ದರು ಕೂಡ ರಾಧೆಯ ಪ್ರೀತಿಯ ಅನುಭವ ಆಗುತ್ತದೆ. ಪ್ರೀತಿ ಎಂದರೆ "ಎಲ್ಲೊ ಇದ್ದರೂ ಕೂಡ, ನಮ್ಮೊಂದಿಗೆ ಇದಾರೆ ಎನ್ನುವ ಸುಂದರ ಅನುಭವ " ಎಂದು ಶ್ರೀಕೃಷ್ಣ ಪರಮಾತ್ಮ ಹೇಳುತ್ತಾನೆ.

ಒಬ್ಬರಿಗೊಬ್ಬರು ಪ್ರೀತಿ, ವಿಶ್ವಾಸ, ನಂಬಿಕೆ,ಗೌರವಗಳನ್ನು ಕೊಡುವುದು ನಿಜವಾದ ಪ್ರೀತಿ, ಪ್ರೀತಿಯನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಂಡರೆ ಅದಕ್ಕೆ ಮೋಹ ಎನ್ನುತ್ತಾರೆ, ಅದಕ್ಕೆ ನೋವಾಗುತ್ತದೆ. ಪ್ರೀತಿಗೆ ಸ್ವತಂತ್ರವಾಗಿ ಇರಲು ಬಿಡಬೇಕು. ಒತ್ತಾಯದಿಂದ ಪಡೆಯಬಾರದು ಪ್ರೀತಿ ನಿನ್ನ ಬಳಿಗೆ ಬಂದರೆ ಸ್ವೀಕರಿಸು, ಇಲ್ಲ ಅಂದರೆ ದೂರ ಸರಿ ಆದರೆ ಹಿಂದಿರುಗಿ ಹೋದ ಪ್ರೀತಿ ಮರಳಿ ಬರಲು ಸಾಧ್ಯ ಇಲ್ಲ.ಪ್ರೀತಿ ಪ್ರೀತಿಯಾಗೆ ಇರಲಿ, ದೈಹಿಕ ಸುಖ, ವ್ಯಾಮೋಹ, ಹಿಡಿತ, ಇದು ಕ್ಷಣಿಕ ಸುಖ ಮಾತ್ರ ಆಗಿರುತ್ತದೆ. ಅಂತೆಯೇ ರಾಧೆ ಶ್ರೀಕೃಷ್ಣನ ಬರುವಿಕೆಗಾಗಿ ಕಾಯುತ್ತಾಳೆ, ಪೂಜಿಸುತ್ತಾಳೆ, ಆರಾಧಿಸುತ್ತಾಳೆ. ರಾಧೆಯ ಭಕ್ತಿಗೆ ಇನ್ನೊಂದು ಹೆಸರೆ "ಕಲಿಯುಗದ ಮೀರಾಬಾಯಿ".ಇವಳು ಕೂಡ ಕೃಷ್ಣಪರಮಾತ್ಮನಲ್ಲಿ ಅಪಾರ ಭಕ್ತಿ ಉಳ್ಳವಳು. ಮೀರಾಬಾಯಿ ಯ ಒಂದೊಂದು ಆರಾಧನೆಲ್ಲಿಯೂ ಕೂಡ ಕೃಷ್ಣನ ಮೇಲೆ ಇರುವ ಪ್ರೀತಿ, ಭಕ್ತಿಯ ಆಳವನ್ನು ತೋರಿಸುತ್ತದೆ. ನಮ್ಮ ಪ್ರೀತಿ ರಾಧಾಕೃಷ್ಣ ರ ಪ್ರೀತಿಯ ಹಾಗೆ ಇರಬೇಕು, ಯಾವುದಕ್ಕೂ ಸಂಬಂಧಗಳು ಗಟ್ಟಿಯಾಗಿ ಇರಬೇಕು ಎನ್ನುವ ಸಂದೇಶ ಶ್ರೀಕೃಷ್ಣ ಪರಮಾತ್ಮನದು "ಬಾಗುವುದರಿಂದ ಸಂಬಂಧಗಳು ಉಳಿಯುತ್ತವೆ ಎಂದರೆ ಬಾಗಿ ಬಿಡು, ಆದರೆ ಪ್ರತಿಸಾರಿ ನೀನೇ ಬಾಗುವುದಾದರೆ, ಬಾಗುವುದನ್ನು ಬಿಟ್ಟುಬಿಡು " ಎನ್ನುತಾನೆ ಕೃಷ್ಣ ದೇವಾ.ಕಾಮಕ್ಕಾಗಿ ಪ್ರೀತಿ ಮಾಡಬಾರದು. ಕೃಷ್ಣ ಪರಮಾತ್ಮ ಕೇವಲ ಪ್ರೇಮಿಯಲ್ಲ, ಜಗದೊದ್ಧಾರಕ, ಚೆಲುವ, 16000 ಗೊಪ್ಪಿಕೆಯರನ್ನು ಮದುವೆ ಮಾಡಿದೊಂಡಿಲ್ಲ, 16000 ಸ್ತ್ರೀಯರು ಇವನ್ನನ್ನು ಆರಾಧಿಸುತ್ತಿದರು, ಕೃಷ್ಣನ ಕೊರಳಿನ ನಾದಕ್ಕೆಮೈ ಮರೆಯುತ್ತಿದರು , ಕೃಷ್ಣನ ಸೇವೆ, ಮನುಕುಲದ ಒಳ್ಳಿತನ್ನು ಬಯಸುವ ಇವನ್ನನ್ನು ಹೃದಯದಲ್ಲಿಟು ಪೂಜಿಸುತ್ತಿದ್ದರು."ಕೃಷ್ಣ ಪರಮಾತ್ಮ ಕುಚೇಲರ "ಗೆಳೆತನ ಎಲ್ಲ ಎಲ್ಲೆಗಳನ್ನು ಮೀರಿ ನಿಂತ್ತಿದೆ , ಇವರ ಗೆಳೆತನಕ್ಕೆ ಸಾಟಿ ಯಾರು? ಕೃಷ್ಣ ಪರಮಾತ್ಮ ಒಳ್ಳೆಯ ಸಾರಥಿ, ಮಾರ್ಗದರ್ಶಕ ಕೂಡ ತನಗೆ ಎಲ್ಲ ಗೊತ್ತಿದ್ದರೂ, ತನ್ನಲ್ಲಿ ಜಗತ್ತಿನ ಎಲ್ಲ ಶಕ್ತಿ ಇದ್ದರೂ ಕೂಡ ಅರ್ಜುನನಿಗೆ ಕೇವಲ ಸಾರಥಿಯಾಗಿಯೇ ಕೆಲಸ ಮಾಡಿದನು ಹೊರತು,ಯಾವದೆ ಗುಟ್ಟು ಬಿಟ್ಟಿಕೊಡಲಿಲ್ಲ, ಯುದ್ಧವನ್ನು ಹೋರಾಡಿಯೆ ಗೆಲ್ಲಬೇಕು ಎನ್ನುವ ಮನೋಭಾವನೆಯು ಸ್ವಾರ್ಥಕ್ಕೆ ವಿರುದ್ಧ ಆಗಿರುವುದು. ದುಷ್ಟ ಕಂಸನನ್ನು ಕೊಲೆ ಮಾಡಿ, ಅನ್ಯಾಯ ಅರಾಜಾಕತೆಯನ್ನು ನಾಶ ಮಾಡಿದನು. ತಂದೆ ತಾಯಿಯ ಮುದ್ದಿನ ಮಗ,ಹಡೆದ ತಾಯಿಯಂತ್ತೆ ಪ್ರೀತಿಸುವ ಯಶೋಧಮಯ್ಯಾ ಗೆ ತುಂಬಾ ಗೌರವಿಸುತ್ತಿದನು.ನಮ್ಮ ಕರ್ಮಕ್ಕೆ ತಕ್ಕ ಫಲ ಸಿಗುತ್ತದೆ ಎನ್ನುವ ಉಪದೇಶ ನೀಡುವ ಕೃಷ್ಣ ಪರಮಾತ್ಮ "ಒಳ್ಳೆಯ ಕಾರ್ಯಕ್ಕೆ ಪ್ರಯತ್ನ ಹೆಚ್ಚಿದಾಗ, ಕಾರ್ಯ ಸಫಲವಾಗುತ್ತೆ " ಎನ್ನುವ ಶ್ರೀಕೃಷ್ಣನ ಉಪದೇಶ ನಿಜಕ್ಕೂ ಸತ್ಯ.
ನೀನು ಕುಚೇಲನಾಗಿದ್ದರೆ ಶ್ರೀಕೃಷ್ಣನಂತ್ತ ಗೆಳೆಯನ್ನನ್ನು ಹುಡುಕು
ನೀನು ಪ್ರೇಮಿಯಾಗುವ ಬಯಕೆ ಇದ್ದರೆ ರಾಧೆಯನ್ನು ಹುಡುಕು
ನೀನು ಅಮ್ಮನಾಗುವ ಬಯಕೆ ಇದ್ದರೆ ಶ್ರೀಕೃಷ್ಣನನ್ನು ಮುದ್ದಿಸುವ ಯಶೋಧಮಯ್ಯ ಆಗು
ನೀನು ಸಮಾಜ ಸೇವಕ ಜಗದೊದ್ಧಾರಕ ಆಗಬೇಕಾದರೆ ಶ್ರೀಕೃಷ್ಣನನಂತ್ತೆ ಸಾರಥಿಯಾಗು ನೀನು ಅನ್ಯಾಯದ ವಿರುದ್ಧ ಹೋರಾಡಬೇಕಾದರೆ ಕಂಸನ್ನನ್ನು ಸಂಹರಿಸು. ಜೈ ಶ್ರೀಕೃಷ್ಣ






ಧರ್ಮವೀರ .ಕೆ
ತಂದೆ : ಬಸವರಾಜ.ಕೆ , ತಾಯಿ : ಹೇಮಲತಾ.ಜಿ
ಶಿಕ್ಷಕ ದಂಪತಿಗಳು, ಹೊಸಪೇಟೆ.



ಶಾರದ
ನಂದಿಬೇವೂರು



ಸನಬಾಳ್ ಪರಿವಾರ, ಕಲಬುರಗಿ



ಲಹರಿ
ಅಮರದೇವರಗುಡ್ಡ
ಕೂಡ್ಲಿಗಿ



ವೈಭವ್
ತಂದೆ : ಭರತ್ , ತಾಯಿ : ವಾಣಿಶ್ರೀ
ನೆಹರೂ ಕಾಲೋನಿ ಹೊಸಪೇಟೆ.



ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಗ್ರಾಮದ ಮಾನಸ ಚಾರಿಟೇಬಲ್ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು ಶ್ರೀಕೃಷ್ಣ ಜನ್ಮಾಷ್ಟಮಿ ನಿಮಿತ್ತ ಶ್ರೀಕೃಷ್ಣ ರಾಧೆ ವೇಶದಲ್ಲಿ ವಿದ್ಯಾರ್ಥಿಗಳು ಕಂಗೊಳಿಸಿ ಗಮನ ಸೆಳೆದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055